Office of the,
Joint Director
Local Audit circle,
4thFloor,T.T.M.C.Building, 'A' Block,B.M.T.C., Shanthinagar, Bangalore-560027.

ಕರ್ನಾಟಕ ಸರ್ಕಾರ
(ಕರ್ನಾಟಕರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ)

ಜಂಟಿ ನಿರ್ದೇಶಕರ ಕಚೇರಿ
ಸ್ಥಳೀಯ ಲೆಕ್ಕಪರಿಶೋಧನಾ ವರ್ತುಲ
ಳನೇ ಮಹಡಿ,ಟಿ.ಟಿ.ಎಂ.ಸಿಕಟ್ಟಡ,
'ಎ' ಬ್ಲಾಕ್, ಬಿ.ಎಂ.ಟಿ.ಸಿ,
ಶಾಂತಿನಗರ,
ಬೆಂಗಳೂರು–27

ಸಂಖ್ಯೆ: **ಜಂ.ನಿ/ಸ್ಥಲೆಪವ/ನೆ.ಯೋ.ಪ್ರಾ**/2024–25 **ದಿನಾಂಕ**

ಇವರಿಗೆ,

ಸದಸ್ಯ ಕಾರ್ಯದರ್ಶಿ,
ನೆಲಮಂಗಲ ಯೋಜನಾ ಪ್ರಾಧಿಕಾರ,
ನೆಲಮಂಗಲ.

ಮಾನ್ಯರೆ,

ವಿಷಯ: 2023–24**ನೇ ಸಾಲಿನ ಲೆಕ್ಕಪರಿಶೋಧನಾ ವರದಿ ಕಳುಹಿಸುವ ಬಗ್ಗೆ.**

*****

ನೆಲಮಂಗಲ ಯೋಜನಾ ಪ್ರಾಧಿಕಾರ ಈ ಸಂಸ್ಥೆಯ 2023–24ನೇ ಸಾಲಿನ ಲೆಕ್ಕ ತನಿಖೆಯು ಮುಗಿದಿದ್ದು, ಸದರಿ ಲೆಕ್ಕಪರಿಶೋಧನಾ ವರದಿಯನ್ನು ಇದರೊಂದಿಗೆ ಲಗತ್ತಿಸಿ ಕಳುಹಿಸಿಕೊಡಲಾಗಿದೆ ಹಾಗೂ ಈ ವರದಿಯ ಕಂಡಿಕೆಗಳಲ್ಲಿ ಗಮನಿಸಿರುವ ಲೋಪದೋಷಗಳು, ಆಕ್ಷೇಪಣೆಗಳು ಹಾಗೂ ವಸೂಲಾತಿ ಕಂಡಿಕೆಗಳ ಮೇಲೆ ಅಗತ್ಯ ಕ್ರಮ ತೆಗೆದುಕೊಂಡು ಅನುಸರಣಾ ವರದಿಯನ್ನು ಸೂಕ್ತ ಪ್ರಾಧಿಕಾರದ ಮೂಲಕ ಕೂಡಲೇ ಕಳುಹಿಸಿಕೊಡುವಂತೆ ಕೋರಲಾಗಿದೆ.

ತಮ್ಮ ವಿಶ್ವಾಸಿ,

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಬೆಂಗಳೂರು.

ಪ್ರತಿಯನ್ನು:–

1. ಆಯುಕ್ತರು ಬೆಂಗಳೂರು ಮಹಾನಗರ ಪ್ರದೇಶ ಅಭಿವೃದ್ಧಿ ಯೋಜನಾ ಪ್ರಾಧಿಕಾರ, ಆಲಿ ಆಸ್ಕರ್ ರಸ್ತೆ ಬೆಂಗಳೂರು.
2. ಪ್ರಧಾನ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ೩ನೇ ಮಹಡಿ ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು.
3. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ, ೪ನೇ ಮಹಡಿ ಟಿ.ಟಿ.ಎಂ.ಸಿ. ಕಟ್ಟಡ, ಶಾಂತಿನಗರ, ಬೆಂಗಳೂರು.
4. ಕಚೇರಿ ಪ್ರತಿ.

ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ ಈ ಪ್ರಾಧಿಕಾರದ 2023–24ನೇ ಸಾಲಿನ ಲೆಕ್ಕ ಪರಿಶೋಧನೆಯಲ್ಲಿ ಕಂಡು ಬಂದ ಪ್ರಮುಖ ನ್ಯೂನತೆಗಳು ಹಾಗೂ ಆಕ್ಷೇಪಣಾ ಮತ್ತು ವಸೂಲಾತಿ ಮೊತ್ತಗಳ ವಿವರಗಳು.

(ರೂ.ಗಳಲ್ಲಿ)

ಕ್ರ. ಸಂ.	**ಕಂಡಿಕೆ ಸಂಖ್ಯೆ**	**ಕಂಡಿಕೆ ವಿವರ**	**ಆಕ್ಷೇಪಣೆ ಮೊತ್ತ**	**ವಸೂಲಾತಿ ಮೊತ್ತ**
1.	9	ಹೂಡಿಕೆಗಳಿಗೆ ವಾರ್ಷಿಕ ಬಡ್ಡಿ ಕಡಿಮೆ ನೀಡದಿರುವುದು	0.00	51453.00
2.	10	ಎನ್.ಪಿ.ಎಸ್ ವಂತಿಕೆಯನ್ನು ನೌಕರರಿಂದ ವಸೂಲಿಸಿದ್ದು, ಎನ್.ಎಸ್.ಡಿ.ಎಲ್ ನ ಅಧಿಕಾರಿ ಮತ್ತು ನೌಕರರ ಖಾತೆಗೆ ಜಮೆ ಮಾಡದಿರುವುದು	176136.00	0.00
3.	11	ಸೆಸ್& ಸರ್‌ಚಾರ್ಜ್	56028719.00	0.00
4.	12	ಉತ್ತಮತೆ ಶುಲ್ಕವನ್ನು ಯೋಜನಾ ಮಂಡಳಿಗೆ ಪಾವತಿಸುವ ಕುರಿತು:	6080829.00	0.00
5.	13	ಸೆಸ್ ಮತ್ತು ಸರ್ ಚಾರ್ಜ್‌ಗಳನ್ನು ಪಡೆಯದಿರುವುದು	1657847.00	0.00
6.	26	ನಗದು ವಹಿಯ ನಿರ್ವಹಣೆಯಲ್ಲಿ ಕಂಡು ಬಂದ ನ್ಯೂನತೆಗಳು	0.00	0.00
7.	28	ಒ.ಕ(ಕ) ಒಚಿಠಿ, ಅಆ, ಚ.ಖ & 03,ುದಜ ಛಿಠಟಠಣಡಿ ಟಚಿಠಿ ಛಠಠಜಞ ಮಾರಾಟ ದಾಸ್ತಾನು ವಹಿ ನಿರ್ವಹಿಸದಿರುವುದು	0.00	0.00
8.	32	ದಿನವಹಿಯನ್ನು ನಿರ್ವಹಿಸದಿರುವುದು	0.00	0.00
		ಒಟ್ಟು	**63943531.00**	**51453.00**

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ
ಪರಿಶೋಧನಾ ವರ್ತುಲ,
ಬೆಂಗಳೂರು.

ನೆಲಮಂಗಲ ಯೋಜನಾ ಪ್ರಾಧಿಕಾರ, ನೆಲಮಂಗಲ 2023–24ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ.

ಭಾಗ–1

1. ಪೀಠಿಕೆ:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ನಿಯಮ 1961 ಭಾಗ 68(ಸಿ)(2) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು 1965ರ ನಿಯಮ 23(1)ರಂತೆ ನೆಲಮಂಗಲ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡು, ಪರಿಶೀಲನಾ ವೇಳೆಯಲ್ಲಿ ಕಂಡುಬಂದ ಪ್ರಮುಖವಾದ ನ್ಯೂನತೆಗಳು, ಆಕ್ಷೇಪಣೆ/ವಸೂಲಾತಿ ಮೊತ್ತಗಳನ್ನು ಈ ವರದಿಯ ಮುಂದಿನ ಕಂಡಿಕೆಗಳಲ್ಲಿ ಪ್ರಸ್ತಾಪಿಸಲಾಗಿದೆ. ವರದಿಯ ಕಂಡಿಕೆಗಳ ನ್ಯೂನತೆಗಳಿಗೆ ಸೂಕ್ತ ಉತ್ತರಗಳೊಂದಿಗೆ ಅನುಸರಣಾ ವರದಿಯನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದ ಮೂಲಕ ನಿಗಧಿತ ಅವಧಿಯೊಳಗೆ ಸಲ್ಲಿಸಲು ಕ್ರಮವಹಿಸುವುದು. ಸರ್ಕಾರದ ಅಧಿಸೂಚನೆ ಸಂಖ್ಯೆ:ನಅಇ:63:ಡಿಟಿಸಿ:96, ದಿನಾಂಕ: 27.01.1997ರಂತೆ ದಿನಾಂಕ:31.08.2001 ರಿಂದ ನೆಲಮಂಗಲ ಪಟ್ಟಣ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಆಯೋಜಿತ ಬೆಳವಣಿಗೆಗಳನ್ನು ನಿಯಂತ್ರಿಸಿ, ನಿಯಮಿತ ಬೆಳವಣಿಗೆಯ ಧ್ಯೇಯ ಸಾಧಿಸುವ ನಿಟ್ಟಿನಲ್ಲಿ ಈ ಯೋಜನಾ ಪ್ರಾಧಿಕಾರವನ್ನು ಪ್ರಾರಂಭ ಮಾಡಲಾಗಿದೆ. ಈ ಯೋಜನೆಯ ಮುಖ್ಯ ಉದ್ದೇಶ ಯೋಜನಾ ಬದ್ಧ ಭೂಉಪಯೋಗ ಮತ್ತು ಅಭಿವೃದ್ಧಿ ಯೋಜಿತ ನಿಯಂತ್ರಣ, ಅನುಷ್ಠಾನ, ಮಹಾ ಯೋಜನೆಯ ತಯಾರಿಕೆ ಮತ್ತು ಪರಿಷ್ಕರಣೆಯಾಗಿರುತ್ತದೆ.

2. ಲೆಕ್ಕ ತಪಾಸಣಾ ತಂಡದ ವಿವರ

1.	ಲೆಕ್ಕ ಪರಿಶೋಧಕರ ಹೆಸರು	1. ಪ್ರಭು ಕೆ.ಪಿ, ಲೆಕ್ಕಾಧೀಕ್ಷಕರು 2. ಮಂಜುಳ ಸಿ, ಲೆಕ್ಕಪರಿಶೋಧಕರು
2.	ಲೆಕ್ಕ ಪರಿಶೋಧನಾ ಅವಧಿ	2023–24
3.	ಲೆಕ್ಕ ಪರಿಶೋಧನೆ ಪ್ರಾರಂಭ ದಿನಾಂಕ	29–04–2024

4.	ಲೆಕ್ಕ ಪರಿಶೋಧನೆ ಮುಕ್ತಾಯ ದಿನಾಂಕ	06–05–2024
5.	ಉಪಯೋಗಿಸಿದ ಮಾನವ ದಿನಗಳು	12 ಮಾನವ ದಿನಗಳು
6.	ಪುನರ್ ಪರಿಶೀಲನಾ ಅಧಿಕಾರಿಗಳು	ಶ್ರೀ ನಾಗರಾಜ ಶೇರೆಗಾರ್, ಕೆ.ಎಸ್.ಎ.ಎಸ್ ಅಪರ ನಿರ್ದೇಶಕರು ಪ್ರಾಂತೀಯ ಕಚೇರಿ, ಬೆಂಗಳೂರು
7.	ಪುನರ್ ಪರಿಶೀಲನಾ ದಿನಾಂಕ	15.07.2024

3. ಸಂಸ್ಥೆಯ ಆಡಳಿತ ವರ್ಗದ ವಿವರಗಳು:

ಕ್ರ.ಸಂ	ಪದನಾಮ	ಹೆಸರು ಶ್ರೀಮತಿ/ಶ್ರೀಯುತರು	ದಿನಾಂಕ	
1.	ಅಧ್ಯಕ್ಷರು	ಶ್ರೀ.ಎಸ್.ಮಲ್ಲಯ್ಯ	01–04–2023	22–05–2023
		ಶ್ರೀ.ಎಂ.ನಾರಾಯಣಗೌಡ	13–03–2024	31–03–2024
3.	ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು ಹಾಗೂ ಸದಸ್ಯ–ಕಾರ್ಯದರ್ಶಿ	ಶ್ರೀ.ಟಿ.ಎಲ್.ಲಕ್ಷ್ಮೀಪತಿ	01–04–2023	31–03–2024
4.	ನಗರ ಮತ್ತು ಗ್ರಾಮಾಂತರ ಯೋಜನಾ ಉಪನಿರ್ದೇಶಕರು	ಶ್ರೀ.ವೆಂಕಟೇಶಪ್ಪ.ಸಿ.ವಿ	01–04–2023	31–03–2024
5.	ನಗರ ಮತು ಗ್ರಾಮಾಂತರ ಯೊಜನಾ ಸಹಾಯಕ ನಿರ್ದೇಶಕರು	ಶ್ರೀ.ಬಿ.ಆರ್.ರಮೇಶ್	01–04–2023	31–03–2024
6.	ನಗರ ಯೋಜಕರು–1	ಶ್ರೀ.ಅವಿನಾಶ್ ಬರಗಿ ಶ್ರೀ.ಚೇತನ್.ಕೆ.ವಿ	01–04–2023 10–08–2023	09–08–2023 31–03–2024

7.	ನಗರ ಯೋಜಕರು-2	ಶ್ರೀ.ಪ್ರಜ್ವಲ್.ಎಸ್.ಬಿ	31-07-2023	31-03-2024
8.	ಸಹಾಯಕ ನಗರ ಯೋಜಕರು	ಖಾಲಿ	-	-
9.	ಪ್ರಥಮ ದರ್ಜೆ ಸಹಾಯಕರು	ಶ್ರೀ.ಬಿ.ಆರ್.ಗಿರೀಶ್	01-04-2023	31-03-2024

4. ಹಿಂದಿನ ಸಾಲುಗಳ ಲೆಕ್ಕಪರಿಶೋಧನಾ ವರದಿಗಳಿಗೆ ಅನುಸರಣಾ ವರದಿ ಸಲ್ಲಿಸದಿರುವುದು :

ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಾವಳಿಗಳು ೧೯೬೫ರ ನಿಯಮ ೨೭ರಂತೆ ಲೆಕ್ಕಪರಿಶೋಧನಾ ವರದಿಯು ಬಿಡುಗಡೆಯಾದ 3 ತಿಂಗಳೊಳಗೆ ವರದಿಯಲ್ಲಿ ಪ್ರಸ್ತಾಪಿಸಲಾಗಿರುವ ನ್ಯೂನತೆಗಳು ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳ ಬಗ್ಗೆ ಪ್ರಾಧಿಕಾರವು ಸೂಕ್ತ ಕ್ರಮ ಕೈಗೊಂಡು ಅನುಸರಣಾ ವರದಿಯನ್ನು ಸಿದ್ಧಪಡಿಸಿ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಸಕ್ಷಮ ಪ್ರಾಧಿಕಾರದ ಮೂಲಕ ಕಂಡಿಕೆಗಳ ತೀರುವಳಿಗಾಗಿ ಸಲ್ಲಿಸಬೇಕಾಗಿರುತ್ತದೆ.

ಪ್ರಾಧಿಕಾರದಲ್ಲಿ ಆಡಿಟ್ ಮಿನಿಟ್ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ಹಿಂದಿನ ಸಾಲುಗಳ ವರದಿಗಳಲ್ಲಿ ಪ್ರಸ್ತಾಪಿಸಲಾಗಿದ್ದರೂ ವಹಿಯನ್ನು ನಿರ್ವಹಿಸಿರುವುದಿಲ್ಲ. ಈ ಬಗ್ಗೆ ಪ್ರಾಧಿಕಾರವು ಕೂಡಲೇ ಅಗತ್ಯ ಕ್ರಮವಹಿಸುವುದು ಸೂಕ್ತವಾಗಿರುತ್ತದೆ. ೨೦೦೧-೦೨ ರಿಂದ 2022-23ನೇ ಸಾಲುಗಳ ವರೆಗಿನ ಆಕ್ಷೇಪಣೆ ಮತ್ತು ವಸೂಲಾತಿ ಕಂಡಿಕೆಗಳು ತೀರುವಳಿಯಾಗದೆ ಬಾಕಿ ಉಳಿದಿರುವುದು ಕಂಡುಬಂದಿರುತ್ತದೆ. ಈ ರೀತಿ ವರ್ಷಾನುಗಟ್ಟಲೆ ತೀರುವಳಿಗೆ ಕ್ರಮ ಕೈಗೊಳ್ಳದಿರುವುದು ಅಧಿಕಾರಿಗಳು/ಸಿಬ್ಬಂದಿಗಳು ವಯೋನಿವೃತ್ತಿ ವರ್ಗಾವಣೆ ಮತ್ತು ಅಕಾಲಿಕ ಮರಣಗಳು ಸಂಭವಿಸುವುದರಿಂದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳು ತೀರುವಳಿಯಾಗದೇ ಹಾಗೆಯೇ ಮುಂದುವರೆಯುವ ಸಾಧ್ಯತೆ ಇರುತ್ತದೆ. ಇದರಿಂದ ಸಂಸ್ಥೆಗೆ ಆರ್ಥಿಕವಾಗಿ ನಷ್ಟವಾಗುವ ಸಂಭವವಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರತಿ ವರ್ಷ ನಿಯಮಾನುಸಾರ ಅನುಸರಣಾ ವರದಿಗಳನ್ನು ಸಿದ್ಧಪಡಿಸಿ ಸಕ್ಷಮ ಪ್ರಾಧಿಕಾರದ ಮೂಲಕ ಸಲ್ಲಿಸುವುದರ ಜೊತೆಗೆ ತೀರುವಳಿಗಳಿಗೆ ಅಗತ್ಯ ಕ್ರಮ ವಹಿಸುವಂತೆ ವರದಿ ಅಭಿಪ್ರಾಯಿಸಿದೆ.

ದಿನಾಂಕ:೩೧-೦೩-೨೦೨3ಕ್ಕೆ ಬಾಕಿ ಇದ್ದ ಆಕ್ಷೇಪಣೆ ಮತ್ತು ವಸೂಲಾತಿ ಮೊತ್ತಗಳ ಕಂಡಿಕೆಗಳ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

(ರೂ.ಗಳಲ್ಲಿ)

ಕ್ರ.ಸಂ	ಅವಧಿ	ಪ್ರಾರಂಭಿಕ ಶಿಲ್ಕು				ತೀರುವಳಿ				
		ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	ಕ
1	2001–02 ರಿಂದ 2004–05	6	1187369	3	8666	0	0	0	0	
2	2005–06	2	135000	3	5196	0	0	0	0	
3	2006–07	2	51875	2	5510	0	0	0	0	
4	2007–08	3	1911060	4	9184	0	0	0	0	
5	2008–09	3	164029	0	0	0	0	0	0	
6	2009–10	0	0	0	0	0	0	0	0	
7	2010–11	0	0	0	0	0	0	0	0	
8	2011–12	0	0	0	0	0	0	0	0	
9	2012–13	0	0	0	0	0	0	0	0	
10	2013–14	0	0	0	0	0	0	0	0	
11	2014–15	0	0	0	0	0	0	0	0	
12	2015–16	0	0	0	0	0	0	0	0	
13	2016–17	2	175670658	2	6262	0	0	2	6262	
14	2017–18	4	158322257	0	0	0	0	0	0	
15	2018–19	3	736277503	1	78683	0	0	0	0	
16	2019–20	3	36750823	0	0	0	0	0	0	
17	2020–21	2	1881902	1	116209	2	1881902	1	116209	
18	2021–22	6	33171419	1	10980	0	0	1	10980	
19	2022–23	5	35781130	0	0	2	6064861	0	0	
ಒಟ್ಟು		41	1181305025	17	240690	4	7946763	4	133451	

ಕ್ರ.ಸಂ	ಅಧಿಕೃತ ಜ್ಞಾಪನ ಸಂಖ್ಯೆ	ವರ್ಷ	ಆಕ್ಷೇಪಣೆ ಕಂಡಿಕೆ ಸಂಖ್ಯೆ	ಆಕ್ಷೇಪಣೆ ಮೊತ್ತ	ವಸೂಲಾತಿ ಕಂಡಿಕೆ ಸಂಖ್ಯೆ	ವಸೂಲಾತಿ ಮೊತ್ತ	ಷರಾ
1		2016–17	0	0	30	4985	ಪೂರ್ಣ

2	ಜಂ.ನಿ/ಸ್ಥಲೆಪವ/ಬೆಂ/ 2024–25/	2016–17	0	0	31	1277	ಪೂರ್ಣ
3		2020–21	17	998395	0	0	ಪೂರ್ಣ
4		2020–21	19	883507	0	0	ಪೂರ್ಣ
5		2020–21	0	0	30	116209	ಪೂರ್ಣ
6		2021–22	0	0	24	10980	ಪೂರ್ಣ
7		2022–23	19	4825700	0	0	ಪೂರ್ಣ
8		2022–23	21	883795	0	0	ಭಾಗಶಃ
9		2022–23	34	355366	0	0	ಪೂರ್ಣ
		ಒಟ್ಟು	4	**7946763**	4	**133451**	

(ರೂ.ಗಳಲ್ಲಿ)

	ಆಕ್ಷೇಪಣೆ ಕಂಡಿಕೆಗಳ ಸಂಖ್ಯೆ	ಆಕ್ಷೇಪಣೆ ಮೊತ್ತ	ವಸೂಲಾತಿ ಕಂಡಿಕೆಗಳ ಸಂಖ್ಯೆ	ವಸೂಲಾತಿ ಮೊತ್ತ
ಪ್ರಾರಂಭಿಕ ಶಿಲ್ಕು ದಿನಾಂಕ 01–04–2023 ರಲ್ಲಿದ್ದಂತೆ	41	1181305025.00	17	240690.00
2023–24 ತೀರುವಳಿಗಳು.	4	7946763.00	4	133451.00
ಒಟ್ಟು	**37**	**1173358262.00**	**13**	**107239.00**
2023–24ನೇ ಸಾಲಿನಲ್ಲಿ ಸೇರ್ಪಡೆ	4	63943531.00	1	51453.00
ಅಂತಿಮ ಶಿಲ್ಕು ದಿನಾಂಕ ೩೧–೦೩–೨೦೨4 ರಲ್ಲಿದ್ದಂತೆ.	**41**	**1237301793.00**	**14**	**158692.00**

ಭಾಗ – 2

5. ಆಯವ್ಯಯದ ಅನುಮೋದನೆ ವಿವರ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, ೧೯೬೧ರ ಕಲಂ ೬೮(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರ ನಿಯಮಗಳು, ೧೯೬೫ರ ನಿಯಮ ೨೨ರನ್ವಯ ಆಯಾ ವರ್ಷದ ಆಯವ್ಯಯ ಪಟ್ಟಿಯನ್ನು ಸಿದ್ಧಪಡಿಸಿ ಪ್ರತಿ ವರ್ಷ ಫೆಬ್ರುವರಿ ೧ನೇ ತಾರೀಖಿನೊಳಗೆ ಪ್ರಾಧಿಕಾರದ ವಿಶೇಷ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ಮಂಜೂರಾತಿಗಾಗಿ ಜಿಲ್ಲಾಧಿಕಾರಿಗಳುರವರಿಗೆ ಹಾಗೂ ಸರ್ಕಾರಕ್ಕೆ ಮಂಜೂರಾತಿಗಾಗಿ ಸಲ್ಲಿಸಬೇಕಾಗಿರುತ್ತದೆ

ಕೆ.ಟಿ.ಸಿ.ಪಿ. ಕಾಯ್ದೆ ೧೯೬೧ರ ಸೆಕ್ಷನ್ ೬೮(ಬಿ) ಮತ್ತು ಕರ್ನಾಟಕ ಯೋಜನಾ ಪ್ರಾಧಿಕಾರದ ನಿಯಮಗಳು ೧೯೬೫ ನಿಯಮ ೨೨ರನ್ವಯ ನೆಲಮಂಗಲ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನ ಆಯವ್ಯಯವನ್ನು ಪ್ರಾಧಿಕಾರವು ದಿ:27–02–2023 ದಿನದಂದು ನಡೆದ 113ನೇ ಸಭೆಯ ವಿಷಯ ಸಂಖ್ಯೆ 113:10.1 ರ ನಡವಳಿಯಲ್ಲಿ ಅನುಮೋದನೆ ಪಡೆಯಲಾಗಿದ್ದು, ಪ್ರಾಧಿಕಾರದ ಪತ್ರ ಸಂಖ್ಯೆ:ನಯೋಪ್ರಾ:ಸಿಬ್ಬಂದಿ:ಆಯ–ವ್ಯಯ:2022–23 ದಿನಾಂಕ:17–03–2023ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರಿಗೆ ಅನುಮೋದನೆಗಾಗಿ ಸಲ್ಲಿಸಿದ್ದು, 2023–24ನೇ ಸಾಲಿನ ಆಯ–ವ್ಯಯವನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆರವರು ಅನುಮೋದನೆ ನೀಡಿರುವುದಿಲ್ಲ.

2023–24ನೇ ಸಾಲಿಗೆ ಅನುಮೋದಿಸಿಕೊಂಡ ಆಯವ್ಯಯ ಮತ್ತು ವಾಸ್ತವಿಕ ಅಂಕಿ ಅಂಶಗಳ ವಿವರಗಳು ಈ ಕೆಳಕಂಡಂತಿವೆ.

ವಿವರ	ಆಯವ್ಯಯದಂತೆ (ರೂ. ಗಳಲ್ಲಿ)
ಪ್ರಾರಂಭಿಕ ಶಿಲ್ಕು	93926173.00
ಆದಾಯ	985890829.00
ಒಟ್ಟು	1079817002.00
ವೆಚ್ಚ	663435000.00
ಅಂತಿಮ ಶಿಲ್ಕು	416382002.00

(ರೂ. ಗಳಲ್ಲಿ)

	ಜಮಾ	ಖರ್ಚು
ನಿರೀಕ್ಷಿತ	985890829.00	663435000.00
ವಾಸ್ತವಿಕ	1206036202.00	1200462802.00
ವ್ಯತ್ಯಾಸ	–220145373.00	–537027802.00

ಮೇಲಿನ ಆಯವ್ಯಯವನ್ನು ಪರಿಶೀಲಿಸಲಾಗಿ 2023–24ನೇ ಸಾಲಿನಲ್ಲಿ ನಿರೀಕ್ಷಿತ ಆದಾಯ ಮತ್ತು ವಾಸ್ತವಿಕ ಆದಾಯಕ್ಕೂ ಅಗಾಧವಾದ ವ್ಯತ್ಯಾಸವಿರುತ್ತದೆ. ಅದೇ ರೀತಿ ನಿರೀಕ್ಷಿತ ವೆಚ್ಚ ಮತ್ತು ವಾಸ್ತವಿಕ ವೆಚ್ಚಕ್ಕೂ ಅಗಾಧವಾದ ವ್ಯತ್ಯಾಸವಿರುತ್ತದೆ. ಆಯವ್ಯಯ ಕೈಪಿಡಿಯ ಸಂಪುಟ ೧ರ ಅನುಚ್ಛೇದ ೧೧ ಮತ್ತು ೧೮ರಂತೆ ಗುರಿ ಸಾಧನೆಗೆ ಅತ್ಯಂತ ಸಮೀಪದ ಅಂದಾಜು ತಯಾರಿಸಲು ನಿರ್ದೇಶನವಿದ್ದು, ಈ ನಿಯಮವನ್ನು ಪಾಲಿಸಿರುವುದಿಲ್ಲ. ಕಳೆದ ಮೂರು ವರ್ಷಗಳ ಆದಾಯ ವೆಚ್ಚಗಳ

ಅಂಕಿಅಂಶಗಳ ಆಧಾರದಲ್ಲಿ ವೈಜ್ಞಾನಿಕವಾಗಿ ಆಯವ್ಯಯ ಅಂದಾಜುಗಳನ್ನು ತಯಾರಿಸಲು ಕ್ರಮವಹಿಸುವಂತೆ ಸೂಚಿಸಿದೆ.

6. ವಾರ್ಷಿಕ ಲೆಕ್ಕಪತ್ರಗಳು:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ೧೯೬೧ರ ಪ್ರಕರಣ ೬೮ (ಸಿ)(೧) ರಂತೆ ಪ್ರತಿಯೋಜನಾ ಪ್ರಾಧಿಕಾರವು ಅಢಾವೆ ಪತ್ರಿಕೆಯನ್ನು ಒಳಗೊಂಡಂತೆ ವಾರ್ಷಿಕ ಲೆಕ್ಕಗಳನ್ನು ನಿರ್ದಿಷ್ಟವಾಗಿ ನಿಗಧಿಗೊಳಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಬೇಕಾಗಿರುತ್ತದೆ.

7. ಆರ್ಥಿಕ ಪರಿಸ್ಥಿತಿಯ ವಿವರ:

ನೆಲಮಂಗಲ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನಲ್ಲಿ ನಿರ್ವಹಿಸಿರುವ ಎಲ್ಲಾ ಖಾತೆಗಳ ಸಮಗ್ರ ಆರ್ಥಿಕ ಪರಿಸ್ಥಿತಿಯ ವಿವರ ಈ ಕೆಳಕಂಡಂತಿವೆ.

(ರೂ.ಗಳಲ್ಲಿ)

	ಮೊಬಲಗು	ವರ್ಗಾವಣೆಗಳು	ಒಟ್ಟು ಮೊಬಲಗು
ದಿನಾಂಕ.೦೧–೦೪–೨೦೨3 ಕ್ಕೆ ಪ್ರಾರಂಭ ಶಿಲ್ಕು	135848925.00	0	135848925.00
2023–24ನೇ ಸಾಲಿನಲ್ಲಿ ಸ್ವೀಕೃತಿ	2431286299.00	1225250097.00	1206036202.00
ಒಟ್ಟು	2567135224.00	1225250097.00	1341885127.00
2023–24ನೇ ಸಾಲಿನಲ್ಲಿ ವೆಚ್ಚ	2425712899.00	1225250097.00	1200462802.00
ದಿನಾಂಕ : ೩೧/೦೩/೨೦೨4 ಕ್ಕೆ ನಗದು ವಹಿಯಂತೆ ಅಂತಿಮ ಶಿಲ್ಕು	141422325.00	0	141422325.00
ದಿನಾಂಕ : ೩೧/೦೩/೨೦೨4 ಕ್ಕೆ ಪಾಸು ಪುಸ್ತಕದಂತೆ ಅಂತಿಮ ಶಿಲ್ಕು	141437320.00	0	141437320.00
ವ್ಯತ್ಯಾಸ	14995.00	0	14995.00

ಖಾತೆವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

8. ಜಮೆ ಹಾಗೂ ಖರ್ಚಿನ ವರ್ಗೀಕರಣ ಕುರಿತು:–

ಕರ್ನಾಟಕ ನಗರ ಯೋಜನಾ ಪ್ರಾಧಿಕಾರದ ಲೆಕ್ಕ ಪತ್ರಗಳ ನಿಯಮಾವಳಿ ೧೯೬೫ರ ನಿಯಮ ೨೧೩ರ ಪ್ರಕಾರ ಜಮೆ ಹಾಗೂ ಖರ್ಚಿನ ವರ್ಗೀಕರಣ ರಿಜಿಸ್ಟರ್ ನಿರ್ವಹಿಸಬೇಕಾಗಿದ್ದು ನಿಯಮಾನುಸಾರ ನಿಗಧಿತ ರಿಜಿಸ್ಟರ್ ನಿರ್ವಹಿಸರುವುದಿಲ್ಲ.

ಇನ್ನೂ ಮುಂದೆ ನಿಯಮಾನುಸಾರ ನಿಗಧಿತ ನಮೂನೆಯಲ್ಲಿ ರಿಜಿಸ್ಟರ್ ನಿರ್ವಹಿಸಿ ತನಿಖೆಗೆ ಹಾಜರಪಡಿಸಲು ಸೂಚಿಸಲಾಗಿದೆ. ಯೋಜನಾ ಪ್ರಾಧಿಕಾರವು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಒದಗಿಸಿದ ನಗದುಪುಸ್ತಕ, ಬ್ಯಾಂಕ್ ಪಾಸ್‌ಶೀಟ್‌ಗಳ ಪ್ರಕಾರ ನಿರ್ವಹಿಸಿರುವ ಜಮಾ-ಖರ್ಚುಗಳನ್ನು ಆಧರಿಸಿ ಆರ್ಥಿಕ ಪರಿಸ್ಥಿತಿ ನಮೂದಿಸಿದೆ. ಶೀರ್ಷಿಕೆವಾರು ಜಮಾ-ಖರ್ಚು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.

ಸೆಕ್ಷನ್-ಎ

9. ಹೂಡಿಕೆಗಳಿಗೆ ವಾರ್ಷಿಕ ಬಡ್ಡಿ ಕಡಿಮೆ ನೀಡಿರುವುದು

೨೦೨೩-೨೪ನೇ ಸಾಲಿನಲ್ಲಿ ನಗರ ಯೋಜನಾ ಪ್ರಾಧಿಕಾರ, ನೆಲಮಂಗಲ ಕಚೇರಿಗೆ ಸಂಬಂಧಿಸಿದ ಹೂಡಿಕೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ ರವರು ವಾರ್ಷಿಕ ಬಡ್ಡಿ ಕಡಿಮೆ ನೀಡಿರುವುದು ಲೆಕ್ಕಪರಿಶೋಧನೆಯಲ್ಲಿ ಕಂಡಬಂದಿರುತ್ತದೆ. ಹೂಡಿಕೆಗಳ ವಿವರ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

ಕ್ರ.ಸಂ	ಬ್ಯಾಂಕ್ ಹೆಸರು	ಖಾತೆ ಸಂಖ್ಯೆ	ಠೇವಣಿಯ ಅವಧಿ ಮತ್ತು ಬಡ್ಡಿ	ಪರಿಪಕ್ವಗೊಳ್ಳ ಬೇಕಾಗಿರುವ ಮೊಬಲಗು	ಪರಿಪಕ್ವ ಗೊಂಡಿರುವ ಮೊಬಲಗು	ಕಡಿಮೆ ಬಡ್ಡಿ ನೀಡಿರುವುದು
1	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ	41254772449	12 ತಿಂಗಳು 6.75% ಬಡ್ಡಿ	474072422	474043161	29261
2	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ	41254772256	365 ದಿನಗಳು 6.75% ಬಡ್ಡಿ	276986134	276969038	17096
3	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ	41259918044	365 ದಿನಗಳು 6.75% ಬಡ್ಡಿ	82563174	82558078	5096
	ಒಟ್ಟು			833621730	833570277	51453

ಈ ಬಗ್ಗೆ ವಿವರಣೆಯನ್ನು ಕೋರಿ ಲೆಕ್ಕಪರಿಚಾರಣಾ ಪತ್ರ ಸಂಖ್ಯೆ:13/2024–25 ದಿನಾಂಕ:–03–05–2024 ನ್ನು ನೀಡಲಾಗಿ ಪ್ರಾಧಿಕಾರದವರು ಉತ್ತರಿಸಿ ಸದರಿ ಹೂಡಿಕೆಗಳ ಪೈಕಿ ಬಡ್ಡಿ ಮೊತ್ತದಲ್ಲಿ ಕ್ರಮವಾಗಿ ರೂ.29,261/– ರೂ.17,096/– ಮತ್ತು ರೂ.5,096/– ಒಟ್ಟು ರೂ.51,453/– ಆಗಿದ್ದು, ರೂ.2,867/– ಗಳಿಗೆ ನಮೂನೆ – 16 ಎ ಅನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಹಾಗಾಗಿ ಒಟ್ಟಾರೆ ಮೊತ್ತ ರೂ.51,453/– ರಲ್ಲಿ ರೂ.2,867–00 ಅನ್ನು ಕಡಿತಗೊಳಿಸಿದ್ದಲ್ಲಿ ರೂ.48,586–00 ಗಳು ಕಡಿಮೆ ಜಮೆಯಾಗಿದ್ದು, ಕಡಿಮೆ ಜಮೆಯಾದ ಮೊತ್ತ ರೂ.48,586/–ಗಳನ್ನು ಪ್ರಾಧಿಕಾರದ ಖಾತೆಗೆ ಮಾಡುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ನೆಲಮಂಗಲ ರವರಿಗೆ ಪತ್ರ ದಿನಾಂಕ:20–09–2023 ರಲ್ಲಿ ಕೋರಲಾಗಿರುತ್ತದೆ. ಹಾಗಾಗಿ ಈ ಸಂಬಂಧ ಮತ್ತೊಮ್ಮೆ ಸದರಿ ಬ್ಯಾಂಕಿಗೆ ಪತ್ರ ವ್ಯವಹರಿಸಿ ಕಡಿಮೆ ಜಮೆ ಮಾಡಲಾದ ಮೊತ್ತ ರೂ.48,586/– ಗಳನ್ನು ಹಿಂಪಡೆಯಲಾಗುವುದು ಎಂದು ಲಿಖಿತವಾಗಿ ವಿವರಣೆಯನ್ನು ನೀಡಿರುತ್ತಾರೆ.

ಸೆಪ್ಟೆಂಬರ್–2023ರ ನಂತರ ಕಡಿಮೆ ಬಡ್ಡಿ ನೀಡಿರುವ ಮೊಬಲಗು ಪಡೆಯಲು ಪ್ರಾಧಿಕಾರದವರು ಯಾವುದೇ ಕ್ರಮ ವಹಿಸದಿರುವುದು ಗಂಭೀರವಾದ ಲೋಪವಾಗಿರುತ್ತದೆ. ಇದನ್ನು ಗಮನಿಸಿದಾಗ ಕಡಿಮೆ ಬಡ್ಡಿ ನೀಡಿರುವ ಮೊಬಲಗನ್ನು ಹಿಂಪಡೆಯಲು ಪ್ರಾಧಿಕಾರದವರು ಆಸಕ್ತಿ ಹೊಂದದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಈ ಬಗ್ಗೆ ಬ್ಯಾಂಕಿನ ಅಧಿಕಾರಿಗಳನ್ನು ಸಂಪರ್ಕಿಸಿ ಕಡಿಮೆ ಬಡ್ಡಿ ನೀಡಿರುವ ಮೊಬಲಗು ರೂ.51453/–ಗಳನ್ನು ಸಂಬಂಧಿಸಿದ ಪಡೆಯಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ. ಅಲ್ಲಿಯವರೆವಿಗೂ ಮೇಲ್ಕಂಡ ಮೊಬಲಗು ರೂ.51453/–ಗಳನ್ನು ವಸೂಲಾತಿಗೆ ಸೂಚಿಸಿದೆ. ವಿವರಗಳನ್ನು ಅನುಬಂಧ–3ರಲ್ಲಿ ಲಗತ್ತಿಸಿದೆ.

ಸೆಕ್ಷನ್–ಬಿ

10. ಎನ್.ಪಿ.ಎಸ್ ವಂತಿಕೆಯನ್ನು ನೌಕರರಿಂದ ವಸೂಲಿಸಿದ್ದು, ಎನ್.ಎಸ್.ಡಿ.ಎಲ್ ನ ಅಧಿಕಾರಿ ಮತ್ತು ನೌಕರರ ಖಾತೆಗೆ ಜಮೆ ಮಾಡದಿರುವುದು.

2023–24ನೇ ಸಾಲಿನಲ್ಲಿ ನಗರ ಯೋಜನಾ ಪ್ರಾಧಿಕಾರ, ನೆಲಮಂಗಲ ಕಚೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ ಮತ್ತು ನೌಕರರ (ನೂತನ ಪಿಂಚಣಿಯ ಯೋಜನೆಯಡಿಯಲ್ಲಿ ಬರುವ)ರ ವೇತನ ಬಿಲ್ಲುಗಳಿಂದ ಸರ್ಕಾರದ ಆದೇಶ ಸಂಖ್ಯೆ:ಎಫ್.ಡಿ(ಎಸ್‌ಪಿಎಲ್)04–ಪಿಇಟಿ/2005, ದಿನಾಂಕ:31–03–2006ರ ಅನುಸಾರ ಉದ್ಯೋಗಿಯ ಪಾಲು ಎನ್.ಪಿ.ಎಸ್ ವಂತಿಕೆ ಯನ್ನು ಶೇ.10 ಕಟಾವಣೆ ಮಾಡಿದ್ದು, ಸದರಿ ಮೊತ್ತಕ್ಕೆ ಸರ್ಕಾರದ ಪಾಲು ಶೇ.14ನ್ನು ಸೇರಿಸಿ ಅಧಿಕಾರಿ ಮತ್ತು ನೌಕರರ

ಎನ್.ಪಿ.ಎಸ್ ಖಾತೆಗೆ ಜಮಾ ಮಾಡಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿರುವುದಿಲ್ಲ. ವಿವರ ಈ ಕೆಳಕಂಡಂತಿದೆ.

(ರೂ. ಗಳಲ್ಲಿ)

ಮಾಹೆ	ಬಿ.ಆರ್ ರಮೇಶ್	ಪ್ರಜ್ವಲ್ ಎಸ್.ಬಿ	ಚೇತನ ಕೆ.ವಿ	ಒಟ್ಟು
ಒಚಿಡಿ–23	7061.00	0.00	0.00	7061.00
೦೮ಡಿ–23	7061.00	0.00	0.00	7061.00
ಒಚಿಥಿ–23	7061.00	0.00	0.00	7061.00
ಎಣಟಿ–23	7277.00	0.00	0.00	7277.00
ಎಣಟ–23	7277.00	0.00	0.00	7277.00
೦ಣರ–23	7277.00	6770.00	4630.00	18677.00
ಖಜಠ–23	7277.00	6770.00	5980.00	20027.00
ಔಛಿಣ–23	7277.00	6770.00	5980.00	20027.00
ಓಠತ–23	7479.00	6958.00	5980.00	20417.00
ಆಜಛಿ–23	7479.00	6958.00	5980.00	20417.00
ಎಚಿಟಿ–24	7479.00	6958.00	5980.00	20417.00
ಈಜಛ–24	7479.00	6958.00	5980.00	20417.00
ಒಟ್ಟು	**87484.00**	**48142.00**	**40510.00**	**176136.00**

ಈ ಬಗ್ಗೆ ವಿವರಣೆಯನ್ನು ಕೋರಿ ಲೆಕ್ಕವಿಚಾರಣಾ ಪತ್ರ ಸಂಖ್ಯೆ:– 16/2024–25 ದಿನಾಂಕ:–04–05–2024 ನ್ನು ನೀಡಲಾಗಿ ಪ್ರಾಧಿಕಾರದವರು ಉತ್ತರಿಸಿ ಪ್ರಾಧಿಕಾರದಲ್ಲಿ ನಿಯೋಜನೆ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ನೂತನ ಪಿಂಚಣಿ ಯೋಜನೆಯಡಿ ಬರುವ ಅಧಿಕಾರಿ / ನೌಕರರ ವೇತನ ಬಿಲ್ ಗಳಿಂದ ಅವರುಗಳ ಓಖಖ ವಂತಿಕೆಯನ್ನು ಶೇಕಡಾ 10ರಷ್ಟು ಕಟಾವಣೆ ಮಾಡಿ ಪ್ರಾಧಿಕಾರದ ಖಾತೆಯಲ್ಲಿ ಇಟ್ಟುಕೊಳ್ಳಲಾಗಿದೆ. ಪ್ರಾಧಿಕಾರದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ / ನೌಕರರ ಓಖಖ ಖಾತೆಗೆ ಹಣ ಜಮೆ ಮಾಡಲು ಪ್ರಾಧಿಕಾರದ ಬಳಿ ಖಾತೆಯ Log in ID, Password, DDO Code, ಇತ್ಯಾದಿ ಲಭ್ಯವಿಲ್ಲದೇ ಇರುವುದರಿಂದ, ಈ ಸಂಬಂಧ Pension Fund & Regulatory Development Authority, New Delhi ರವರಿಗೆ ಅಗತ್ಯ ವ್ಯವಸ್ಥೆ ಕಲ್ಪಿಸುವಂತೆ ಕೋರಿ ಪ್ರಾಧಿಕಾರದ ಪತ್ರ ದಿನಾಂಕ:18–08–

2023 ರಲ್ಲಿ ಕೋರಲಾಗಿರುತ್ತದೆ. ಈ ಸಂಬಂಧ ಹಣ ಪಾವತಿಸಲು ಅವಕಾಶ ಕಲ್ಪಿಸಿದ ಕೂಡಲೇ ಅಧಿಕಾರಿ/ ನೌಕರರ NPS ವಂತಿಕೆಯೊಂದಿಗೆ ಸರ್ಕಾರದ ಪಾಲು ಶೇಕಡಾ 14 ರಷ್ಟು ಅನ್ನು ಸೇರಿಸಿ ಅಧಿಕಾರಿ / ನೌಕರರ NPS ಖಾತೆಗೆ ಹಣ ಜಮೆ ಮಾಡಲು ಕ್ರಮವಹಿಸಲಾಗುವುದು ಎಂದು ಲಿಖಿತವಾಗಿ ವಿವರಣೆಯನ್ನು ನೀಡಿರುತ್ತಾರೆ.

ಎನ್.ಪಿ.ಎಸ್ ವಂತಿಕೆಯ ಮೊತ್ತಕ್ಕೆ ಸರ್ಕಾರದ ಪಾಲು ಶೇ.14ನ್ನು ಸೇರಿಸಿ ಅಧಿಕಾರಿ ಮತ್ತು ನೌಕರರ ಎನ್.ಪಿ.ಎಸ್ ಖಾತೆಗೆ ಜಮೆ ಮಾಡಿ ವಿವರ ಒದಗಿಸುವವರೆಗೆ ರೂ.176136/-ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

11. ಸೆಸ್ & ಸರ್‌ಚಾರ್ಜ್:-

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ ರ ಕಾಲಂ ೧೪ಎರನ್ವಯ ಹಾಗೂ ಈ ಕೆಳಕಂಡ ಉದ್ದೇಶಗಳಿಗೆ ಸೆಸ್ ಅನ್ನು ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು ೧೯೬೫ ರ ನಿಯಮ ೩೭-ಸಿರಡಿ ಅಧಿಸೂಚನೆ ಸಂಖ್ಯೆ:ಯುಡಿಡಿ/೩/ಟಿಟಿಪಿ/೨೦೧೫ ದಿನಾಂಕ:೨೫.೦೨.೨೦೨೦ ಮತ್ತು ದಿನಾಂಕ:೨೧.೦೬.೨೦೨೧ರಲ್ಲಿ ನಿಗಧಿಪಡಿಸಿರುವ ದರಗಳಂತೆ ಪಾವತಿಸಿಕೊಳ್ಳಲಾಗಿರುತ್ತದೆ ವಸೂಲಾತಿ ವಿವರಣೆ ಈ ಕೆಳಗಿನಂತಿವೆ.

(ರೂ.ಗಳಲ್ಲಿ)

ಕ್ರ. ಸಂ.	ವಿವರಗಳು	ನೀರು ಸರಬರಾಜು ವ್ಯವಸ್ಥೆ ಅಭಿವೃದ್ಧಿ	ವರ್ತುಲ ರಸ್ತೆ ಅಭಿವೃದ್ಧಿ ಸರ್‌ಚಾರ್ಜ್	ಕೊಳಚೆ ಪ್ರದೇಶಗಳ ಅಭಿವೃದ್ಧಿ	ಸಮೂಹ ಸಾರಿಗೆ ವ್ಯವಸ್ಥೆ ಅಭಿವೃದ್ಧಿ ಸರ್‌ಚಾರ್ಜ್	ಒಟ್ಟು
1	2023-24ನೇ ಸಾಲಿನಲ್ಲಿ ವಸೂಲಿ	7868555.00	7868555.00	3939390.00	39301100.00	58977600.00
2	ಶೇ.೫ ರಂತೆ ಸಂಗ್ರಹಣ ಶುಲ್ಕ ಕಳೆದಿರುವುದು.	393428.00	393428.00	196970.00	1965055.00	2948881.00
3	2023-24ಲ್ಲಿನ ಸರ್ಕಾರಕ್ಕೆ ಪಾವತಿಸಬೇಕಾದ ನಿವ್ವಳ ವಸೂಲಿ	7475127.00	7475127.00	3742420.00	37336045.00	56028719.00
4	ಪ್ರಾರಂಭ ಶಿಲ್ಕು 01-04-2023ಕ್ಕೆ	8736034.00	8699649.00	4352506.00	31483932.00	53272121.00
5	ಒಟ್ಟು (3+4)	**16211161.00**	**16174776.00**	**8094926.00**	**68819977.00**	**109300840.00**
6	2023-24ರ ಸರ್ಕಾರಕ್ಕೆ ಜಮಾ	0.00	0.00	0.00	0.00	0.00

7	ಆಖ್ಯೆರು ಶಿಲ್ಕು 31–03–2024 ಕ್ಕೆ	16211161.00	16174776.00	8094926.00	68819977.00	109300840.00

ಪ್ರಸಕ್ತ ವರ್ಷದಲ್ಲಿ ವಸೂಲಿಸಿದ ಮೊತ್ತರೂ.58977600/–ಗಳಿಗೆ ಶೇಕಡಾ ೫ ಸಂಗ್ರಹಣಾ ಶುಲ್ಕದ ಮೊತ್ತ ರೂ.2948881/–ಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ.56028719/–ಗಳನ್ನು ಸರ್ಕಾರಕ್ಕೆ ಜಮೆ ಮಾಡಬೇಕಾಗಿದ್ದು, ಸದರಿ ಸೆಸ್ ಮೊತ್ತಗಳನ್ನು ಜಮೆ ಮಾಡಲು ಸರ್ಕಾರದಿಂದ ಲೆಕ್ಕ ಶೀರ್ಷಿಕೆಯ ವಿವರ / ಖಾತೆಯ ವಿವರಗಳನ್ನು ನೀಡಿರುವುದಿಲ್ಲ. ಆದ್ದರಿಂದ, ಸದರಿ ಸೆಸ್ ಮೊತ್ತವನ್ನು ಪ್ರತ್ಯೇಕ ಬ್ಯಾಂಕ್ ಖಾತೆಯನ್ನು ತೆರೆದು ಬ್ಯಾಂಕ್ ಖಾತೆಗೆ ಜಮೆ ಮಾಡಲಾಗಿರುತ್ತದೆಂದು ಪ್ರಾಧಿಕಾರದಲ್ಲಿ ತಿಳಿಸಿರುತ್ತಾರೆ. ಆದ್ದರಿಂದ, ಸರ್ಕಾರದಿಂದ ಯಾವ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಬೇಕೆಂಬ ಸ್ಪಷ್ಟ ವಿವರಗಳನ್ನು ಪಡೆದು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡುವವರೆಗೂ ರೂ.56028719/–ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ.

12. ಉತ್ತಮತೆ ಶುಲ್ಕವನ್ನು ಯೋಜನಾ ಮಂಡಳಿಗೆ ಪಾವತಿಸುವ ಕುರಿತು:

ಯೋಜನಾ ಪ್ರಾಧಿಕಾರವು ಪ್ರತಿ ವರ್ಷ ವಸೂಲಿಸುವ ಉತ್ತಮತೆ ಶುಲ್ಕದ ಶೇ.೫ ರಷ್ಟು ಮೊತ್ತವನ್ನು ಕರ್ನಾಟಕ ನಗರ ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ರ ಸೆಕ್ಷನ್ ೧೪ರನ್ವಯ ಕರ್ನಾಟಕ ರಾಜ್ಯ ನಗರ ಯೋಜನಾ ಮಂಡಳಿ, ಬೆಂಗಳೂರು ರವರಿಗೆ ವಂತಿಕೆ ರೂಪದಲ್ಲಿ ಪಾವತಿಸಬೇಕಾಗಿರುತ್ತದೆ. ಅದರಂತೆ, 2023–24ನೇ ಸಾಲಿನಲ್ಲಿ ಒಟ್ಟಾರೆ ರೂ.121616589/–ಗಳ ಉತ್ತಮತೆ ಶುಲ್ಕ ವಸೂಲಿಸಲಾಗಿದ್ದು, ಶೇ.೫ರ ಬಾಬ್ತು ರೂ.6080829/–ಗಳನ್ನು ರಾಜ್ಯ ಯೋಜನಾ ಮಂಡಳಿಗೆ ಜಮಾ ಮಾಡಲು ಕ್ರಮವಹಿಸುವುದು.

2023–24ನೇ ಸಾಲಿನ ಉತ್ತಮತೆ ಶುಲ್ಕದ ಡಿ.ಸಿ.ಬಿ ವಿವರ ಈ ಕೆಳಕಂಡಂತಿರುತ್ತದೆ.

(ರೂ.ಗಳಲ್ಲಿ)

01–04–2023 ಕ್ಕೆ ಪ್ರಾರಂಭ ಬಾಕಿ	4825700.00
2023–24ನೇ ಸಾಲಿನಲ್ಲಿ ಪಾವತಿ ಮಾಡಬೇಕಾದ ಮೊತ್ತ	6080829.00
ಒಟ್ಟು	**10906529.00**
2023–24ನೇ ಸಾಲಿನಲ್ಲಿ ಪಾವತಿ	4825700.00
31–03–2024 ಕ್ಕೆ ಅಂತಿಮ ಶಿಲ್ಕು	**6080829.00**

ಪ್ರಸಕ್ತ ಸಾಲಿನಲ್ಲಿ ಜಮೆ ಮಾಡಬೇಕಾದ ಮೊತ್ತವನ್ನು ರಾಜ್ಯ ಯೋಜನಾ ಮಂಡಳಿಗೆ ಜಮೆ ಮಾಡುವವರೆಗೆ ರೂ.6080829/– ಗಳನ್ನು ಆಕ್ಷೇಪಣೆಗೆ ಸೂಚಿಸಿದೆ.

13. ಸೆಸ್ ಮತ್ತು ಸರ್ ಚಾರ್ಜ್‌ಗಳನ್ನು ಪಡೆಯದಿರುವುದು

2023–24ನೇ ಸಾಲಿನಲ್ಲಿ ನಗರಸಭೆ ವ್ಯಾಪ್ತಿಯಲ್ಲಿ ಕಟ್ಟಡ ನಿರ್ಮಾಣ ಸಂಬಂಧ ಒಟ್ಟು 195 ಅರ್ಜಿ ಕಡತಗಳನ್ನು ಆನ್‌ಲೈನ್/ಆಫ್‌ಲೈನ್ ಮುಖಾಂತರ ನೆಲಮಂಗಲ ಪ್ರಾಧಿಕಾರದಲ್ಲಿ ಸ್ವೀಕರಿಸಲಾಗಿದ್ದು, ಅನುಮೋದಿಸಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರದ ಆದೇಶದಂತೆ ಕಟ್ಟಡ ನಕ್ಷೆಗಳಿಗೆ ತಾಂತ್ರಿಕವಾಗಿ ಪರಿಶೀಲಿಸಿ, ಸರ್ಕಾರದ ಅಧಿಸೂಚನೆ ಸಂಖ್ಯೆ:ಯುಡಿ೨೩:ಟಿ.ಟಿ.ಪಿ/೨೦೨೦(ಇ). ದಿ:೨೧.೦೬.೨೦೨೧ ರಂತೆ ಸೆಸ್ ಮತ್ತು ಸರ್ಚಾರ್ಜ್‌ಗಳನ್ನು ವಸೂಲಿಸಿಕೊಂಡು ಪ್ರತ್ಯೇಕ ಖಾತೆಗಳಲ್ಲಿ ಸಂಗ್ರಹಣೆ ಮಾಡಲು ಮತ್ತು ಸದಸ್ಯ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ತ್ರೈಮಾಸಿಕವಾಗಿ ವರ್ಗಾಯಿಸುವ ನಿಬಂಧನೆಗೊಳಪಟ್ಟು ತಾಂತ್ರಿಕ ಅಭಿಪ್ರಾಯ ನೀಡಲಾಗುತ್ತದೆ. ಸೆಸ್ ಮತ್ತು ಸರ್ ಚಾರ್ಜ್‌ಗಳ ವಿವರ ಈ ಕೆಳಗಿನಂತಿವೆ.

(ರೂ.ಗಳಲ್ಲಿ)

ಕ್ರ. ಸಂ	ಸೆಸ್ಸುಗಳ ವಿವರಣೆ	2023–24ನೇ ಸಾಲಿನಲ್ಲಿ ವಸೂಲಿಸಿರುವ ಮೊತ್ತ	ಶೇ 5 ರಂತೆ ಸಂಗ್ರಹಣ ಶುಲ್ಕ	ಪಾವತಿಸಬೇಕಾಗಿರುವ ಮೊತ್ತ
1	ಕಟ್ಟಡದ ಉತ್ತಮತೆ ಶುಲ್ಕ	932500	46625	885875
2	ನೀರು ಸರಬರಾಜು ಯೋಜನೆ ಸೆಸ್	80950	4047	76903
3	ವರ್ತುಲ ರಸ್ತೆ ಸರ್‌ಚಾರ್ಜ್	76850	3842	73008
4	ಕೊಳಚೆ ನಿರ್ಮೂಲನಾ ಸೆಸ್	44200	2210	41990
5	ಎಂ.ಆರ್.ಟಿ.ಎಸ್ ಸರ್‌ಚಾರ್ಜ್	362150	18107	344043
6	ಪರಿಶೀಲನಾ ಶುಲ್ಕ	69500	3475	66025
7	ಕೆರೆ ಸಂರಕ್ಷಣೆ ಶುಲ್ಕ	178950	8947	170003
	ಒಟ್ಟು	**1745100**	**87253**	**1657847**

ಪ್ರಸಕ್ತ ವರ್ಷದಲ್ಲಿ ವಸೂಲಿಸಿದ ಮೊತ್ತ ರೂ.1745100/–ಗಳಿಗೆ ಶೇಕಡಾ ೫ ಸಂಗ್ರಹಣಾ ಶುಲ್ಕ ಮೊತ್ತ ರೂ.87253/–ಗಳನ್ನು ಹೊರತುಪಡಿಸಿ ಬಾಕಿ ಮೊತ್ತ ರೂ.1657847/–ಗಳನ್ನು ಸದಸ್ಯ ಕಾರ್ಯದರ್ಶಿ, ನೆಲಮಂಗಲ ಯೋಜನಾ ಪ್ರಾಧಿಕಾರಕ್ಕೆ ಜಮೆ ಮಾಡಬೇಕಾಗಿದ್ದು, ಜಮೆ ಮಾಡುವವರೆಗೂ ರೂ.1657847/–ಗಳನ್ನು

ಆಕ್ಷೇಪಣೆಯಲ್ಲಿಡಲಾಗಿದೆ. ವಿವರಗಳನ್ನು ಅನುಬಂಧ-4ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

ಸೆಕ್ಷನ್-ಸಿ

14. ಪುಸಕ್ತ ಸಾಲಿನ ಲೆಕ್ಕ ಪರಿಶೋಧನೆ ಕುರಿತು:

2023-24ನೇ ಸಾಲಿನ ಲೆಕ್ಕ ಪರಿಶೋಧನೆಯನ್ನು ಪ್ರಾರಂಭಿಸಿದ ದಿನಾಂಕ:29-04-2023ರಂದು ಈ ಕೆಳಕಂಡ ಶಿಲ್ಕುಗಳನ್ನು ಭೌತಿಕವಾಗಿ ಪರಿಶೀಲಿಸಲಾಗಿದ್ದು

1	ನಗದು ಮೊತ್ತ ರೂ	ರೂ.829/-
2	ಉಪಯೋಗಿಸದೆ ಇರುವ ಧನಾಧೇಶ ಪುಸ್ತಕಗಳು	ಇರುವುದಿಲ್ಲ
3	ಅಂಚೆ ಚೀಟಿಗಳು	ರೂ.6728/-
4	ರಸೀದಿ ಪುಸ್ತಕಗಳು	(ಎ) ಸಾಮಾನ್ಯ ರಸೀದಿ ಪುಸ್ತಕ 88 ರಸೀದಿ ಪುಸ್ತಕಗಳು (ಸಂಖ್ಯೆ: 233 ರಿಂದ 320 ರಸೀದಿಗಳ ಸಂಖ್ಯೆ: 11601 ರಿಂದ 160000)
		(ಬಿ) ಅಕ್ರಮ ಸಕ್ರಮ ರಸೀದಿ ಪುಸ್ತಕಗಳು 09 ರಸೀದಿ ಪುಸ್ತಕ ಸಂಖ್ಯೆ: 12 ರಿಂದ 20

ಸಂಬಂಧಿಸಿದ ವಹಿಗಳ ಅಂತಿಮ ಶಿಲ್ಕಿಗೆ ತಾಳೆಯಾಗಿರುತ್ತದೆ.

15. ಅಂಚೆ ಚೀಟಿ ವಹಿವಾಟುಗಳ ವಿವರ:

2023-24ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಪ್ರಾರಂಭಿಕ ಶಿಲ್ಕಾಗಿ ಇದ್ದ / ಖರೀದಿಸಿದ ಹಾಗೂ ಉಪಯೋಗಿಸಲಾದ ಅಂಚೆ ಚೀಟಿಗಳ ವಿವರಗಳು ಈ ಕೆಳಕಂಡಂತಿರುತ್ತದೆ.

01-04-2023 ಕ್ಕೆ ಪ್ರಾರಂಭಿಕ ಶಿಲ್ಕು	1929.00
2023-24 ನೇ ಸಾಲಿಗೆ ಸ್ವೀಕೃತಿ/ ಖರೀದಿ	32000.00
ಒಟ್ಟು	**33929.00**
2023-24ನೇ ಸಾಲಿಗೆ ಉಪಯೋಗ	31221.00

31–03–2024 ರ ಅಖ್ಯೆರು ಶಿಲ್ಕು	2708.00

16. ಕಚೇರಿ ಕೈ ಹಣ (ಖಟಠಿಡಿಜಣ) ನಗದು ವಹಿಯ ವಿವರ:

2023–24ನೇ ಸಾಲಿಗೆ ಕಛೇರಿ ಕೈ ಹಣ ವಹಿಯನ್ನು ನಿರ್ವಹಿಸಿ ಲೆಕ್ಕಪರಿಶೋಧನೆಗೆ ಹಾಜರುಪಡಿಸಲಾಗಿದ್ದು, ಲೆಕ್ಕ ತಪಾಸಣೆ ಪ್ರಾರಂಭಿಸಿದ ದಿನಾಂಕದಂದು ಕೈ ಹಣ ಶಿಲ್ಕು ರೂ.829/–ಗಳಿರುತ್ತದೆ.

17. ಸಾಲಗಳು:

ನಗರ ಯೋಜನಾ ಪ್ರಾಧಿಕಾರ, ನೆಲಮಂಗಲ ಕಚೇರಿಯ 2023–24ನೇ ಸಾಲಿನಲ್ಲಿ ಪಡೆದ ಸಾಲ, ಸಂಚಯಿಸಿದ ಬಡ್ಡಿ, ಹಿಂದಿನ ಸಾಲುಗಳಲ್ಲಿ ಪಡೆದಿದ್ದ ಸಾಲ, ಮರುಪಾವತಿಸಲಾದ ಅಸಲು ಮತ್ತು ಬಡ್ಡಿ ಹಾಗೂ ಬಾಕಿ ಇರುವ ಅಸಲು ಮತ್ತು ಬಡ್ಡಿ ವ್ಯವಹಾರಗಳ ವಿವರ ಹಾಗೂ ದಾಖಲಾತಿಗಳನ್ನು ಒಳಗೊಂಡ ಸಾಲದ ವಹಿಯನ್ನು ಹಾಜರುಪಡಿಸಲು ಕೋರಿ ಲೆಕ್ಕವಿಚಾರಣಾ ಪತ್ರ ಸಂಖ್ಯೆ:– 03/2024–25 ದಿನಾಂಕ:–29–04–2024ಕ್ಕೆ ಪ್ರಾಧಿಕಾರದವರು ಉತ್ತರಿಸಿ 2023–24ನೇ ಸಾಲಿನಲ್ಲಿ ಯಾವುದೇ ಸಾಲಗಳ ವ್ಯವಹಾರವು ಪ್ರಾಧಿಕಾರದಲ್ಲಿ ನಡೆದಿರುವುದಿಲ್ಲ ಎಂದು ಲಿಖಿತವಾಗಿ ವಿವರಣೆ ನೀಡಿರುತ್ತಾರೆ.

18. ಮುಂಗಡಗಳು:

2023–24ನೇ ಸಾಲಿನ ಮುಂಗಡದ ವಹಿಯನ್ನು ಹಾಜರುಪಡಿಸಲು ಕೋರಿ ಲೆಕ್ಕವಿಚಾರಣಾ ಪತ್ರ ಸಂಖ್ಯೆ:– 06/2024–25 ದಿನಾಂಕ:–29–04–2024ಕ್ಕೆ ಪ್ರಾಧಿಕಾರದವರು ಉತ್ತರಿಸಿ 2023–24ನೇ ಸಾಲಿನಲ್ಲಿ ಯಾವುದೇ ಸಾಲಗಳ ವ್ಯವಹಾರವು ಪ್ರಾಧಿಕಾರದಲ್ಲಿ ನಡೆದಿರುವುದಿಲ್ಲ ಎಂದು ಲಿಖಿತವಾಗಿ ವಿವರಣೆ ನೀಡಿರುತ್ತಾರೆ.

19. ವಾರ್ಷಿಕ ವರದಿ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಅಧಿನಿಯಮ ೧೯೬೧ ರಂತೆ ಪ್ರತಿಯೋಜನಾ ಪ್ರಾಧಿಕಾರವು ಅಢಾವೆ ಪತ್ರಿಕೆಯನ್ನು ಒಳಗೊಂಡಂತೆ ವಾರ್ಷಿಕ ವರದಿಯನ್ನು ನಿರ್ದಿಷ್ಟವಾಗಿ ನಿಗಧಿಗೊಳಿಸಿರುವ ನಮೂನೆಗಳಲ್ಲಿ ಸಿದ್ಧಪಡಿಸಲಾಗಿರುತ್ತದೆ.

20. ನಿಶ್ಚಿತ ಠೇವಣಿ ಕುರಿತು:

ನೆಲಮಂಗಲ ಯೋಜನಾ ಪ್ರಾಧಿಕಾರದ 2023–24ನೇ ಸಾಲಿನ ನಿಶ್ಚಿತ ಠೇವಣಿ ವಹಿ ಮತ್ತು ಠೇವಣಿ ವಿವರ ಹಾಗೂ ಕಡತವನ್ನು ಪರಿಶೀಲಿಸಲಾಗಿ ಪ್ರಸಕ್ತ ಸಾಲಿನಲ್ಲಿ

ರೂ.1064700000/–ಗಳ ಮೊತ್ತದ 06 ಸಂಖ್ಯೆಯ ನಿಶ್ಚಿತ ಠೇವಣಿಗಳನ್ನು ಕೆನರಾ ಬ್ಯಾಂಕ್, ನೆಲಮಂಗಲ ಶಾಖೆಯಲ್ಲಿ ಒಂದು ವರ್ಷದ ಅವಧಿಗೆ e-procurement ಮೂಲಕ ಟೆಂಡರ್ ಕರೆದು ಠೇವಣಿ ರೂಪದಲ್ಲಿ ತೊಡಗಿಸಲಾಗಿರುತ್ತದೆ. ವಿವರ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

ಕ್ರ. ಸಂ.	ಯಾವ ಬ್ಯಾಂಕ್‌ಖಾತೆಯಿಂದ ಠೇವಣಿಯನ್ನು ಇಡಲಾಗಿದೆ	ಠೇವಣಿಯ ದಿನಾಂಕ	ನಿಶ್ಚಿತ ಠೇವಣಿ ಹೂಡಿರುವ ಬ್ಯಾಂಕ್ ಹೆಸರು	ಠೇವಣಿಯ ಪ್ರಮಾಣ ಪತ್ರ ಸಂಖ್ಯೆ	ಠೇವಣಿಯ ಮೊತ್ತ (ರೂ.ಗಳಲ್ಲಿ)	ಠೇವಣಿಯ ಅವಧಿ ಮತ್ತು ಬಡ್ಡಿ	ಠೇವಣಿಯ ಮುಕ್ತಾಯ ದಿನಾಂಕ	ಮೆಚ್ಯುರಿಟಿ ಮೊತ್ತ (ರೂ.ಗಳಲ್ಲಿ)
1	ಖ.ಃ. ೦/ಛಿ. ಓ೦. 67180100010295 ಬ್ಯಾಂಕ್ ಆಫ್ ಬರೋಡ ಉತ್ತಮತೆ ಶುಲ್ಕ	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570537 A/c NO 140118241354/1	580000000	366 ದಿನಗಳು 7.55% ಬಡ್ಡಿ	18–10–2024	625172370
2	ಖ.ಃ. ೦/ಛಿ. ಓ೦. 671801000009678 ಬ್ಯಾಂಕ್ ಆಫ್ ಬರೋಡ ಕೆರೆ ಸಂರಕ್ಷಣಾ ಶುಲ್ಕ	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570538 A/c NO 140118241354/2	316500000	366 ದಿನಗಳು 7.55% ಬಡ್ಡಿ	18–10–2024	341150095
3	ಖ.ಃ. ೦/ಛಿ. ಓ೦. 671801000009673 ಬ್ಯಾಂಕ್ ಆಫ್ ಬರೋಡ ನೀರು ಸರಬರಾಜು ಯೋಜನಾ ಕರ	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570539 A/c NO 140118241354/3	23000000	366 ದಿನಗಳು 7.55% ಬಡ್ಡಿ	18–10–2024	24791318
4	ಖ.ಃ. ೦/ಛಿ. ಓ೦. 671801000009674 ಬ್ಯಾಂಕ್ ಆಫ್ ಬರೋಡ ವರ್ತುಲ ರಸ್ತೆ ಅಧಿಕ ಕರ ಕೊಳಚೆ ನಿರ್ಮೂಲನಾ ಕರ	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570540 A/c NO 140118241354/4	34100000	366 ದಿನಗಳು 7.55% ಬಡ್ಡಿ	18–10–2024	36755824
5	ಖ.ಃ. ೦/ಛಿ. ಓ೦. 671801000009676 ಬ್ಯಾಂಕ್ ಆಫ್ ಬರೋಡ ಎಂ.ಆರ್.ಟಿ.ಎಸ್	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570541 A/c NO 140118241354/5	82000000	366 ದಿನಗಳು 7.55% ಬಡ್ಡಿ	18–10–2024	88386439
6	ಖ.ಃ. ೦/ಛಿ. ಓ೦. 1435104000299893	18–10–2023	ಕೆನರಾ ಬ್ಯಾಂಕ್, ನೆಲಮಂಗಲ	NO 570542 A/c NO 140118241354/6	29100000	366 ದಿನಗಳು 7.55% ಬಡ್ಡಿ	18–10–2024	31366407

	ಐ.ಡಿ.ಬಿ.ಐ ಭದ್ರತಾ ಠೇವಣಿ ಖಾತೆ							
				ಒಟ್ಟು ಮೊತ್ತ	1064700000			1147622453

ನಿಶ್ಚಿತ ಠೇವಣಿ ವಿವರಗಳನ್ನು ಅನುಬಂಧ-೦3 ರಲ್ಲಿ ಲಗತ್ತಿಸಿದೆ.

21. ರಸೀದಿ ಪುಸ್ತಕಗಳ ವಿವರ:

2023–24ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಪ್ರಾರಂಭಿಕ ಶಿಲ್ಕಾಗಿ ಇದ್ದ / ಖರೀದಿಸಿದ ಹಾಗೂ ಪೂರ್ಣ ಪ್ರಮಾಣದಲ್ಲಿ ಉಪಯೋಗಿಸಲಾದ ರಸೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ವಿವರ	ಸಾಮಾನ್ಯ ರಸೀದಿ ಪುಸ್ತಕಗಳು	ವಿವರ	ಅಕ್ರಮ ಸಕ್ರಮ ರಸೀದಿ ಪುಸ್ತಕಗಳು	ವಿವರ
1.	೦೧-೦೪-೨೦೨3 ಕ್ಕೆ ಪ್ರಾರಂಭಿಕ ಉಳಿಕೆ	05	216 ರಿಂದ 220	09	12 ರಿಂದ 20
2.	2023–24ನೇ ಸಾಲಿನಲ್ಲಿ ಸ್ವೀಕೃತಿ	100	221 ರಿಂದ 320	00	
	ಒಟ್ಟು	105		09	
3.	2023–24ನೇ ಸಾಲಿನ ಉಪಯೋಗ	17	216 ರಿಂದ 232	00	
4.	31–03–2024 ಕ್ಕೆ ಅಂತಿಮ ಉಳಿಕೆ	88	233 ರಿಂದ 320	09	12 ರಿಂದ 20

22. ಪ್ರಸಕ್ತ ಸಾಲಿನಲ್ಲಿ ಭಾಗಶಃ ಉಪಯೋಗಿಸಿದ ರಸೀದಿ ಪುಸ್ತಕಗಳ ವಿವರ:

2023–24ನೇ ಸಾಲಿನಲ್ಲಿ ನೆಲಮಂಗಲ ಯೋಜನಾ ಪ್ರಾಧಿಕಾರದಲ್ಲಿ ಭಾಗಶಃ ಉಪಯೋಗಿಸಿರುವ ರಶೀದಿ ಪುಸ್ತಕಗಳ ವಿವರಗಳು ಈ ಕೆಳಕಂಡಂತೆ ಇರುತ್ತದೆ.

ಕ್ರ. ಸಂ	ರಸೀದಿ ಪುಸ್ತಕ ಸಂಖ್ಯೆ	ಉಪಯೋಗಿಸಿದ ಕೊನೆಯ ರಸೀದಿಯ ಪುಟದ ಸಂಖ್ಯೆ/ ದಿನಾಂಕ	ವಿವರ
1.	232	11555/ದಿ:30.03.2024	–

ಪ್ರಸಕ್ತ ಸಾಲಿನಲ್ಲಿ ಭಾಗಶಃ ಉಪಯೋಗಿಸಿರುವ ಮೇಲ್ಕಂಡ ರಶೀದಿ ಪುಸ್ತಕವನ್ನು ಮುಂದಿನ ಸಾಲಿನ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

23. ಅಕ್ರಮ ಸಕ್ರಮ ರಸೀದಿ ಪುಸ್ತಕಗಳು:

2023–24ನೇ ಸಾಲಿನಲ್ಲಿ ಅಕ್ರಮ-ಸಕ್ರಮ ರಸೀದಿ ಪುಸ್ತಕಗಳನ್ನು ಉಪಯೋಗ ಮಾಡಿರುವುದಿಲ್ಲ.

24. ಮುದ್ರಿತ ರಸೀದಿ ಬಳಸಿ ಶುಲ್ಕ ವಸೂಲಿಸುತ್ತಿರುವ ಕುರಿತು:-

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಾಲಂ 18ಎರನ್ವಯ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು 1965ರ ನಿಯಮ 37-ಎಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/23/ಟಿಟಿಪಿ/2020ಎಫ್ ದಿನಾಂಕ:21.06.2021ರಲ್ಲಿ ನಿಗಧಿಪಡಿಸಿರುವ ದರಗಳನ್ವಯ ಯೋಜನಾ ಪ್ರಾಧಿಕಾರದ ಶುಲ್ಕ ಮತ್ತು ಸೆಸ್‌ಗಳನ್ನು ಪಾವತಿಸಿಕೊಳ್ಳಬೇಕಾಗಿರುತ್ತದೆ.

2023–24ನೇ ಸಾಲಿನ ಲೆಕ್ಕಪರಿಶೋಧನೆಯಲ್ಲಿ ರಸೀದಿ ವಿವರಗಳನ್ನು ಪರಿಶೀಲಿಸಲಾಗಿ, ಪ್ರಾಧಿಕಾರದಿಂದ ನೀಡಲಾಗುವ ಸೇವೆಗಳಿಗೆ ಸಂಗ್ರಹಿಸಲಾಗುವ ಪರಿಶೀಲನಾ ಶುಲ್ಕ, ಉತ್ತಮತೆ ಶುಲ್ಕ, ಕೆರೆ ಸಂರಕ್ಷಣಾ ಶುಲ್ಕ, ಕೊಳಚೆ ನಿರ್ಮೂಲನಾ ಉಪಕರ ಹಾಗೂ ಮಹಾನಗರ ಸಾರಿಗೆ ಉಪಕರಗಳನ್ನು ಪ್ರಸ್ತುತ ಸನ್ನಿವೇಶದಲ್ಲಿಯೂ ಸಹ ಮುದ್ರಿತ ಕೈ ರಸೀದಿಯ ಮೂಲಕ ಸಂಗ್ರಹಿಸಲಾಗುತ್ತಿದೆ. ಸದರಿ ರಸೀದಿ ಪುಸ್ತಕಗಳನ್ನು ನಿಯಮಾನುಸಾರ ಮುದ್ರಿಸುವುದು, ದಾಸ್ತಾನು ತೆಗೆದುಕೊಳ್ಳುವುದು ಮತ್ತು ಉಪಯೋಗಿಸಲಾದ ರಸೀದಿ ಪುಸ್ತಕಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದು ಕಷ್ಟಸಾಧ್ಯವಾಗಿರುತ್ತದೆ. ಯೋಜನಾ ಪ್ರಾಧಿಕಾರಕ್ಕೆ ಪಾವತಿಸಬೇಕಾದ ವಿವಿಧ ಶುಲ್ಕಗಳು ಮತ್ತು ಸರ್ ಚಾರ್ಜ್‌ಗಳನ್ನು ಡಿ.ಡಿ ಮೂಲಕ ವಸೂಲಿಸಲಾಗುತ್ತಿದ್ದು, ಮಾನ್ಯುಲ್ ರಸೀದಿಗಳಲ್ಲಿ ಡಿ.ಡಿ ಸಂಖ್ಯೆ, ದಿನಾಂಕ, ಬ್ಯಾಂಕ್ ಮತ್ತು ಮೊತ್ತಗಳನ್ನು ಅಂಕಿಗಳಲ್ಲಿ ಮತ್ತು ಅಕ್ಷರಗಳಲ್ಲಿ ನಮೂದಿಸಬೇಕಾಗಿದ್ದು, ಮಾನವ ಸಹಜ ತಪ್ಪುಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಇದರಿಂದಾಗಿ ಕಛೇರಿಯ ಜಮಾ ವಿವರಗಳನ್ನು ಬ್ಯಾಂಕ್ ಪಾಸ್ ಶೀಟ್‌ನೊಂದಿಗೆ ಲೆಕ್ಕಸಮನ್ವಯ ಮಾಡಿಕೊಂಡು ನಿಖರತೆಯನ್ನು ಖಚಿತಪಡಿಸಿಕೊಳ್ಳಲು ವಿಳಂಬವಾಗುತ್ತದೆ.

ಪ್ರಸ್ತುತ ಸರ್ಕಾರದ ಅಧೀನದಲ್ಲಿ ಇರುವ ಬಹುತೇಕ ಎಲ್ಲಾ ಇಲಾಖೆಗಳು/ನಿಗಮ ಮಂಡಳಿಗಳು/ಸ್ಥಳೀಯ ಸಂಸ್ಥೆಗಳಲ್ಲಿ ಸಂಗ್ರಹಿಸುವ ವಿವಿಧ ತೆರಿಗೆ ಮತ್ತು ಶುಲ್ಕಗಳನ್ನು ಸರ್ಕಾರ ನಿಗದಿಪಡಿಸಿದ ಅಥವಾ ತಮ್ಮದೇ ಆದ ತಂತ್ರಾಂಶದ ಮೂಲಕ ವಸೂಲಿಸಲಾಗುತ್ತಿದೆ. ಯೋಜನಾ ಪ್ರಾಧಿಕಾರದ ಆರ್ಥಿಕ

ವಹಿವಾಟು ದಿನದಿಂದ ದಿನಕ್ಕೆ ಹೆಚ್ಚಳವಾಗುತ್ತಿರುವುದರಿಂದ ಲೆಕ್ಕಪತ್ರ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ನಿಖರತೆಯನ್ನು ಕಾಯ್ದುಕೊಳ್ಳಲು ಪ್ರಾಧಿಕಾರದ ಅಗತ್ಯತೆಗೆ ಅನುಗುಣವಾಗಿ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ ಶುಲ್ಕಗಳನ್ನು ಸಂಗ್ರಹಿಸುವುದು ಅವಶ್ಯಕ ಮತ್ತು ಸಮಂಜಸವೆನಿಸುತ್ತದೆ(ಓಜಜಜ ಠಜಿ ಞಜ ಊಠಣಿಡಿ) ಎಂದು ಲೆಕ್ಕಪರಿಶೋಧನೆ ಅಭಿಪ್ರಾಯಿಸಿದೆ.

25. ಸಕ್ರಮೀಕರಣ ಸಂಬಂಧ ನಿಗಧಿತ ನಮೂನೆ ವಿವರ:

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಪ್ರಾಧಿಕಾರ (ಅನಧಿಕೃತ ಅಭಿವೃದ್ಧಿ ಅಥವಾ ನಿರ್ಮಾಣಗಳನ್ನು ಸಕ್ರಮಗೊಳಿಸುವಿಕೆ) ನಿಯಮಗಳು ೨೦೦೭ ರ ನಿಗಧಿ ನಮೂನೆಗಳ ವ್ಯವಹಾರ ೨೦೨೨-೨೩ನೇ ಸಾಲಿನಲ್ಲಿ ಈ ಕೆಳಕಂಡಂತಿರುತ್ತದೆ.

01-04-2023 ಕ್ಕೆ ಪ್ರಾರಂಭಿಕ ಶಿಲ್ಕು	525
2023-24ನೇ ಸಾಲಿನಲ್ಲಿ ಸ್ವೀಕೃತಿ	0
ಒಟ್ಟು	525
2023-24ನೇ ಸಾಲಿನಲ್ಲಿ ಉಪಯೋಗಿಸಿದ್ದು	0
31-03-2024 ಕ್ಕೆ ಅಂತಿಮ ಶಿಲ್ಕು	525

26. ನಗದು ವಹಿಯ ನಿರ್ವಹಣೆಯಲ್ಲಿ ಕಂಡು ಬಂದ ನ್ಯೂನತೆಗಳು:-

ಸರ್ಕಾರದ ಆದೇಶ ಸಂಖ್ಯೆಯು ಡಿಡಿ ೧೬ ಸಿಎಆರ್ ೨೦೦೬ ದಿನಾಂಕ ೨೧-೦೨-೨೦೦೬ ರ ಪ್ರಕಾರ ದಿನಾಂಕ: ೧-೪-೨೦೦೬ ರಿಂದ ದ್ವಿದಾಖಲು ಪದ್ಧತಿಯಲ್ಲಿ ನಮೂನೆ ಕೆ.ಎಂ.ಎಫ್ ನಂ.೧ ರಲ್ಲಿ ನಗದು ಪುಸ್ತಕವನ್ನು ನಿರ್ವಹಿಸಬೇಕಾಗಿದ್ದು, ಸದರಿ ಪ್ರಾಧಿಕಾರದಲ್ಲಿ ನಗದು ಪುಸ್ತಕವನ್ನು ಮೇಲಿನ ನಮೂನೆಯಲ್ಲಿ ನಿರ್ವಹಿಸದೆ ಸಾಮಾನ್ಯ ವಹಿಯಲ್ಲಿ ನಿರ್ವಹಿಸಲಾಗಿರುತ್ತದೆ. ಪ್ರಾಧಿಕಾರದಲ್ಲಿ ೦೭ ಖಾತೆಗಳಿದ್ದು ಎಲ್ಲಾ ಬ್ಯಾಂಕ್ ಖಾತೆಗಳ ವಹಿವಾಟುಗಳನ್ನು ಒಂದೇ ನಗದು ಪುಸ್ತಕದಲ್ಲಿ ನಿರ್ವಹಿಸಲಾಗಿರುತ್ತದೆ. ಕರ್ನಾಟಕ ಆರ್ಥಿಕ ಸಂಹಿತೆ ೧೯೫೮ ಅನುಚ್ಛೇದ ೩೨೭ ರಿಂದ ೩೩೨ ರಂತೆ ನಗದು ಪುಸ್ತಕವನ್ನು ನಿರ್ವಹಿಸಲು ಮತ್ತು ಪ್ರತಿಯೊಂದು ಬ್ಯಾಂಕ್ ಖಾತೆಗೆ ಪ್ರತ್ಯೇಕ ನಗದು ಪುಸ್ತಕವನ್ನು ತೆರೆದು ನಿರ್ವಹಿಸಲು ಕ್ರಮವಹಿಸತಕ್ಕದ್ದು.

27. ಭದ್ರತಾ ಠೇವಣಿ ವಿವರ:

ನೆಲಮಂಗಲ ಯೋಜನಾ ಪ್ರಾಧಿಕಾರದಿಂದ 2023–24ನೇ ಸಾಲಿನಲ್ಲಿ ಹಾಜರುಪಡಿಸಲಾದ ಕಡತಗಳು ಹಾಗೂ ಜಮಾ ಖರ್ಚು ಪಟ್ಟಿಯಂತೆ ವಲಯ ನಿಯಮಾವಳಿಗಳಂತೆ ಗುಂಪು ಮನೆ ೫ ಮಹಡಿಗಳಿಗಿಂತ ಹೆಚ್ಚಿದ ವಾಸದ ಗುಂಪು ಮನೆಗೆ ಹಾಗೂ ವಾಣಿಜ್ಯ ಉದ್ದೇಶದ ಕಟ್ಟಡಗಳಿಗೆ ೩೦೦ ಚ.ಮೀಗೆ ಹೆಚ್ಚಿದ ಕಟ್ಟಡಗಳಿಗೆ ನಿರ್ಮಾಣಕ್ಕೆ ಅನುಮೋದನೆಗಾಗಿ ಚ.ಮೀಗೆ ರೂ.೫೦ ರಂತೆ ಭದ್ರತಾ ಠೇವಣಿ ವಸೂಲಿಸ ಬೇಕಾಗಿದ್ದು, ಪ್ರಸಕ್ತ ಸಾಲಿನಲ್ಲಿ ರೂ.೭,೪೭,೭೦೦/-ಗಳನ್ನು ವಸೂಲಿಸಲಾಗಿದೆ.

೩ ವರ್ಷ ಮೇಲ್ಪಟ್ಟಿರುವ ಠೇವಣಿಗಳನ್ನು ಕರ್ನಾಟಕ ಆರ್ಥಿಕ ಸಂಹಿತೆ ೨೭೮ ರಂತೆ ಸಂಸ್ಥೆ ನಿಧಿಗೆ ಮುಟ್ಟುಗೊಲು ಹಾಕಿಕೊಳ್ಳುವುದು ನಂತರದ ಅವಧಿಯಲ್ಲಿ ಹಿಂಪಾವತಿಗೆ ಕೋರಿಕೆ ಬಂದಲ್ಲಿ ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಮರು ಪಾವತಿಸಲು ಕ್ರಮ ವಹಿಸುವುದು.

(ರೂ.ಗಳಲ್ಲಿ)

ದಿ:01–04–2023 ಕ್ಕೆ ಪ್ರಾರಂಭ ಶಿಲ್ಕು	29152704.00
2023–24ನೇ ಸಾಲಿಗೆ ಸ್ವೀಕೃತಿಗಳು	5384100.00
ಒಟ್ಟು ರೂ.	34536804.00
2023–24ನೇ ಸಾಲಿಗೆ ಪಾವತಿ	0.00
ದಿ :31–03–2024 ಕ್ಕೆ ಅಂತಿಮ ಶಿಲ್ಕು	34536804.00

28. M.P(P) Map, CD, Z.R & A3 size colour map book ಮಾರಾಟ ದಾಸ್ತಾನು ವಹಿ ನಿರ್ವಹಿಸದಿರುವುದು:

2023–24ನೇ ಸಾಲಿನಲ್ಲಿ ಅನುಮೋದಿತ **M.P (P) Map, CD, Z.R & A3 size colour map book** ಗಳ ವಿವರ ಈ ಕೆಳಕಂಡಂತೆ ಇದೆ. 2023–24ನೇ ಸಾಲಿಗೆ ಯಾವುದೇ ಮಾರಾಟವಾಗದಿರುವುದು ಕಂಡು ಬಂದಿರುವುದಿಲ್ಲ.

ಕ್ರ.ಸಂ	ವಿವರ	ಪ್ರಾರಂಭಿಕ ಶಿಲ್ಕು	ಖರೀದಿ ಸಂಖ್ಯೆ	ಮಾರಾಟ ಮಾಡಲಾದ ಸಂಖ್ಯೆ	ಉಳಿಕೆ ವಿವರ
1.	M.P(P) Map	0	0	0	0
2.	CD	89	0	0	89
3.	Z.R	48	0	0	48
4.	A3 size colour map book	0	0	0	0

29. ನೆಲಮಂಗಲ ಯೋಜನಾ ಪ್ರಾಧಿಕಾರದ ವ್ಯಾಪ್ತಿಯಲ್ಲಿರುವ ಸಿ.ಎ ನಿವೇಶನ ಮತ್ತು ಪಾರ್ಕ್ಗಳ ವಿವರ:

2023–24ನೇ ಸಾಲಿನಲ್ಲಿ ಯೋಜನಾ ಪ್ರಾಧಿಕಾರದ ವತಿಯಿಂದ ಅನುಮೋದನೆಗೊಂಡಿರುವ ವಿವಿಧ ಬಡಾವಣೆಗಳ ವಿವರಗಳು ಹಾಗೂ ಅನುಮೋದಿತ ಬಡಾವಣೆಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ / ಚರಂಡಿ / ಪಾರ್ಕ್ / ಆಸ್ಪತ್ರೆ / ಆಟದ ಮೈದಾನ ಹಾಗೂ ಸಿ.ಎ ನಿವೇಶನಗಳನ್ನು ಪ್ರಾಧಿಕಾರದ ಹೆಸರಿಗೆ ಉಪ ನೋಂದಣಾಧಿಕಾರಿಗಳ ಕಛೇರಿಯಿಂದ ನೊಂದಣಿ ಮಾಡಿಸಿರುವ ವಿವರವನ್ನು ಒಳಗೊಂಡಂತೆ ದೃಢೀಕೃತ ವಹಿಯನ್ನು ನಿರ್ವಹಿಸಲು ಅಗತ್ಯ ಕ್ರಮವಹಿಸುವಂತೆ ಅಗತ್ಯವಾಗಿರುತ್ತದೆ.

30. ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.೪೦% ರಷ್ಟು ನಿವೇಶನಗಳನ್ನು ಬಿಡುಗಡೆಗೊಳಿಸಿರುವ ವಿವರ:

ಕರ್ನಾಟಕ ಸರ್ಕಾರದ ಸುತ್ತೋಲೆ ಸಂ: ನಅಇ:೧೧೨:ಬೆಂರೂಪ್ರಾ:೨೦೦೫ ದಿನಾಂಕ:೨೬-೦೫-೨೦೦೫ ರಂತೆ ಅನುಮೋದಿತ ವಸತಿ ವಿನ್ಯಾಸದಲ್ಲಿನ ಶೇ.೬೦ ರಷ್ಟು ನಿವೇಶನಗಳನ್ನು ನೋಂದಣಿ ಮಾಡುವ ಬಗ್ಗೆ ಉಪನೊಂದಣಾಧಿಕಾರಿಗಳಿಗೆ ಪತ್ರ ಮುಖೇನ ಬಿಡುಗಡೆಗೊಳಿಸಿರುವ ಸಂಬಂಧ ಹಿಂದಿನ ಸಾಲಿನ ವರದಿಗಳಲ್ಲಿ ಪ್ರಸ್ತಾಪಿಸಲಾಗಿದೆ. ಅದರಂತೆ, ಷರತ್ತಿನ ಕ್ರ.ಸಂ: ೧ ರಂತೆ ಎರಡನೇ ಹಂತದಲ್ಲಿ ಒಟ್ಟಾರೆ ವಿನ್ಯಾಸದಲ್ಲಿನ ಉಳಿಕೆ ಶೇ.೪೦ ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಮುನ್ನ ವಿನ್ಯಾಸದಲ್ಲಿನ ಎಲ್ಲಾ ಸಿವಿಲ್ ಕಾಮಗಾರಿಗಳನ್ನು ಡಾಂಬರ್ ರಸ್ತೆ, ಮಳೆ ನೀರಿನ ಚರಂಡಿ, ಕೊಳಚೆ ನೀರಿನ ಸಂಗ್ರಹಣಾ ಘಟಕ, ಕುಡಿಯುವ ನೀರಿನ ಸರಬರಾಜು (ಓಹೆಚ್ಟಿ) ವಿದ್ಯುಚ್ಛಕ್ತಿ ಸಂಪರ್ಕ ಹಾಗೂ ರಸ್ತೆ ಬದಿ ಸಾಲು ಮರಗಳ ನೆಡುವಿಕೆ ಕಾರ್ಯವನ್ನು ಎರಡು ವರ್ಷದೊಳಗೆ ಸಂಪೂರ್ಣಗೊಳಿಸಬೇಕಾಗಿರುತ್ತದೆ. ಷರತ್ತಿನಂತೆ ಎರಡು ವರ್ಷಗಳ ಅವಧಿಯೊಳಗೆ ವಸತಿ ವಿನ್ಯಾಸಗಳಲ್ಲಿ ನಾಗರೀಕ ಸೌಲಭ್ಯಗಳನ್ನು ಒದಗಿಸದೆ ನವೀಕರಣವನ್ನು ಪಡೆಯದೆ ಬಡಾವಣೆಯನ್ನು ಅಭಿವೃದ್ಧಿ ಪಡಿಸದೆ ಇರುವ ಮಾಲೀಕರಿಂದ ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಪತ್ರ ಸಂಖ್ಯೆ:ಬಿಎಂಆರ್ಡಿಎ/ಎಡಿಟಿಪಿ-ಇತರೆ/೨೪/೨೦೧೩-೧೪ ದಿನಾಂಕ:೩೧-೧೦-೨೦೧೪ರಂತೆ ದಂಡ ವಸೂಲಿಸಿ ನಿವೇಶನ ಬಿಡುಗಡೆಗೆ ಕ್ರಮವಹಿಸುವುದು ಅಗತ್ಯವಾಗಿರುತ್ತದೆ ಎಂದು ವರದಿ ಅಭಿಪ್ರಾಯಿಸಿದೆ.

31. ಕೆರೆ ಸಂರಕ್ಷಣೆ ಅಭಿವೃದ್ಧಿ ಶುಲ್ಕದ ಮೊತ್ತದ ಬಳಕೆಯ ವಿವರ:

2023–24ನೇ ಸಾಲಿನ ಅವಧಿಯಲ್ಲಿ ವ್ಯವಸಾಯದ ಭೂಮಿಯನ್ನು ಜಿಲ್ಲಾಧಿಕಾರಿಯವರ ಅನುಮೋದನೆಯೊಂದಿಗೆ ವಸತಿಯೇತರವಾಗಿ ಪರಿವರ್ತನೆಗೊಂಡ ಖಾತೆದಾರರು ಸದರಿ ಸ್ವತ್ತಿನ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ಮಾಡಲು ಪ್ರಾಧಿಕಾರಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಅದನ್ನು ತಾಂತ್ರಿಕ ನಿಯಮಗಳ ಪ್ರಕಾರ ಪರಿಶೀಲನೆ ಮಾಡಿ ವಿನ್ಯಾಸ ನಕ್ಷೆಯನ್ನು ಮಂಜೂರಾತಿ ನೀಡುವಾಗ ಸರ್ಕಾರದ ಪತ್ರ ಸಂಖ್ಯೆ:ನಅಇ 90 ಬಿಎಂಆರ್ 2010, ದಿನಾಂಕ:29–09–2010ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 18ಎ(1)ರನ್ವಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ(ಖಜರಿಣತಜಟಿಚಿಣುಠಟಿ ಠಜಿ ಖಿಚಿಟಿಞ) ಸಲುವಾಗಿ ಖಾಸಗಿ ವಿನ್ಯಾಸ ಮಾಲೀಕರಿಂದ ಪ್ರತಿ ಎಕರೆಗೆ ರೂ.1,00,000/–ರಂತೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ 36 ಬೆಮಪ್ರಾ 2016 (ಭಾಗ) ದಿನಾಂಕ:27.01.2017ರಂತೆ ಒಂದು ಚ.ಮೀ.ಗೆ ರೂ.25/–ರಂತೆ ಶುಲ್ಕವನ್ನು ವಸೂಲಿ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ.

2023–24ನೇ ಸಾಲಿಗೆ ಸಂಗ್ರಹವಾಗಿರುವ ಕೆರೆ ಸಂರಕ್ಷಣಾ ಶುಲ್ಕ	ರೂ. 39893440/–

ಸದರಿ ಮೊತ್ತವನ್ನು ಸಾರ್ವಜನಿಕರಿಂದ ಕೆರೆ ಪುನರ್ಜೀವನ ಶುಲ್ಕವೆಂದು ವಸೂಲಿ ಮಾಡುವುದರಿಂದ ಸದರಿ ಮೊತ್ತವನ್ನು ಕೆರೆ ಅಭಿವೃದ್ಧಿ ಯೋಜನೆಗಾಗಿ ಮಾತ್ರ ಬಳಸುವುದು ಸೂಕ್ತವೆಂದು ಲೆಕ್ಕಪರಿಶೋಧನೆಯಲ್ಲಿ ಅಭಿಪ್ರಾಯ ಪಟ್ಟಿದೆ.

32. ದಿನವಹಿಯನ್ನು ನಿರ್ವಹಿಸದಿರುವುದು:

ಯೋಜನಾ ಪ್ರಾಧಿಕಾರದಲ್ಲಿ ವಿವಿಧ ಶುಲ್ಕಗಳನ್ನು ರಸೀದಿಗಳ ಮೂಲಕ ಸ್ವೀಕರಿಸಲಾಗಿರುತ್ತದೆ. ವಸೂಲಿಸಿರುವ ಮೊತ್ತಗಳನ್ನು ದಿನವಹಿಯಲ್ಲಿ ನಮೂದಿಸಿ ತದನಂತರ ಬ್ಯಾಂಕ್‌ಗೆ ಜಮಾ ಮಾಡಬೇಕಾಗಿರುತ್ತದೆ. ಆದರೆ, ಸದರಿ ಯೋಜನಾ ಪ್ರಾಧಿಕಾರದಲ್ಲಿ ಈ ಕ್ರಮ ಅನುಸರಿಸದೆ ದಿನವಹಿಯಲ್ಲಿ ನಮೂದಿಸಿದೆ ನೇರವಾಗಿ ನಗದು ಪುಸ್ತಕದಲ್ಲಿ ನಮೂದಿಸಿರುವುದು ಬಂದಿರುತ್ತದೆ, ಇನ್ನು ಮುಂದೆ ನಿಯಮ ರೀತಿಯ ದಿನವಹಿ ನಿರ್ವಹಿಸಿ ಮಾಸಾಂತ್ಯ ಫೋಷ್ಟಾರೆ ಹಾಕಿ ದೃಢೀಕರಿಸಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲು ಸೂಚಿಸಿದೆ.

33. ಶುಲ್ಕ ವಸೂಲಾತಿ:

1. **ಉತ್ತಮತೆ ಶುಲ್ಕ**:–

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ರ ಕಲಂ ೧೪(೧)ರ ಅಡಿಯಲ್ಲಿ ಪಾವತಿಸಿಕೊಳ್ಳುವ ಶುಲ್ಕಗಳ ದರಗಳನ್ನು ಪರಿಷ್ಕರಿಸಿ ಕರ್ನಾಟಕ ಯೋಜನಾ ಪ್ರಾಧಿಕಾರಗಳ ನಿಯಮಗಳು ೧೯೬೫ರ ನಿಯಮ ೩೭-ಎ ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಯುಡಿಡಿ/೩/ಟಿಟಿಪಿ/೨೦೧೫ ದಿನಾಂಕ: ೨೫.೦೨.೨೦೨೦ರಲ್ಲಿ ತಿದ್ದುಪಡಿತರಲಾಗಿದೆ. ಇದರಂತೆ 2023-24ನೇ ಸಾಲಿನಲ್ಲಿ ರೂ.121616589/-ಗಳ ಉತ್ತಮತೆ ಶುಲ್ಕವನ್ನು ಕ್ರಮಬದ್ಧವಾಗಿ ಸಂಗ್ರಹವಾಗಿದೆ.

2. **ಕೆರೆ ಸಂರಕ್ಷಣೆ ಶುಲ್ಕ**:-

ಸರ್ಕಾರದ ಪತ್ರ ಸಂಖ್ಯೆ: ನಅಇ ೯೦ ಬಿಎಂಆರ್ ೨೦೧೦, ದಿನಾಂಕ:೨೯-೦೯-೨೦೧೦ ರಂತೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ ೧೯೬೧ರ ಕಲಂ ೧೪ಎ(೧)ರನ್ವಯ ಪ್ರಾಧಿಕಾರದ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂರಕ್ಷಣೆ (Rejuvenation of Tanks) ಸಲುವಾಗಿ ಖಾಸಗಿ ವಿನ್ಯಾಸ ಮಾಲೀಕರಿಂದ ಪ್ರತಿ ಎಕರೆಗೆ ರೂ.೧,೦೦,೦೦೦/-ರಂತೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ: ನಅಇ ೩೬ ಬೆಮಪ್ರಾ ೨೦೧೬ (ಭಾಗ) ದಿನಾಂಕ:೨೭-೦೧-೨೦೧೭ ರಂತೆ ಒಂದು ಚ.ಮೀ.ಗೆ ರೂ.೨೫/-ರಂತೆ ಶುಲ್ಕವನ್ನು ಪಾವತಿಸಿಕೊಳ್ಳಲಾಗಿದೆ. ಪ್ರಸ್ತುತ ಸಾಲಿನಲ್ಲಿ ರೂ.39893440/-ಗಳ ಕೆರೆ ಸಂರಕ್ಷಣೆ ಶುಲ್ಕವನ್ನು ಕ್ರಮಬದ್ಧವಾಗಿ ಸಂಗ್ರಹವಾಗಿದೆ.

34. ಕಟ್ಟಡಗಳ ನಕ್ಷೆ ಮಂಜೂರಾತಿ ವಿವರ:

ಯೋಜನಾ ಪ್ರಾಧಿಕಾರದಿಂದ ಕಟ್ಟಡ ನಕ್ಷೆ ಮಂಜೂರಾತಿ ಕೋರಿ, ಬಂದ ಅರ್ಜಿಗಳ ಸಂಖ್ಯೆ ಮತ್ತು ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಹಾಗೂ ಹಿಂದಿನ ಸಾಲಿನಲ್ಲಿ ಮಂಜೂರಾತಿಗೆ ಬಂದ ಅರ್ಜಿಗಳು ವಿಲೇವಾರಿ ಮಾಡಿರುವ ವಿವರ ಹಾಗೂ ದಿನಾಂಕ:೩೧-೦೩-೨೦೨4 ಕ್ಕೆ ವಿಲೇವಾರಿಯಾಗದೆ ಬಾಕಿ ಇರುವ ಪ್ರಾಧಿಕಾರವು ನೀಡಿರುವ ಮಾಹಿತಿಯಂತೆ ಈ ಕೆಳಕಂಡಂತಿದೆ.

ದಿನಾಂಕ:೦೧-೦೪-೨೦೨3 ಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಬಾಕಿ	23
2023-24ನೇ ಸಾಲಿಗೆ ಸ್ವೀಕರಿಸಿದ ಅರ್ಜಿಗಳು	93
ಒಟ್ಟು	116
2023-24 ರಲ್ಲಿ ಮಂಜೂರಾತಿ / ವಿಲೇವಾರಿ ಮಾಡಿದ ಅರ್ಜಿಗಳ ವಿವರ	110
ದಿನಾಂಕ:೩೧-೦೩-೨೦೨4 ಕ್ಕೆ ಬಾಕಿ ಉಳಿದ ಕಡತಗಳು	03

2023–24 ರಲ್ಲಿ ತಿರಸ್ಕರಿಸಲಾಗಿರುವ ಅರ್ಜಿ / ಕಡತಗಳು	03

ಕಟ್ಟಡ ನಕ್ಷೆ ಮಂಜೂರಾತಿ ವಹಿ ನಿರ್ವಹಿಸಿ ದೃಢೀಕರಿಸಲು ಕ್ರಮವಹಿಸುವುದು.

35. ಬಡಾವಣೆ ವಿನ್ಯಾಸ ನಕ್ಷೆ ಮಂಜೂರಾತಿ ವಿವರ:

ಯೋಜನಾ ಪ್ರಾಧಿಕಾರದಿಂದ ಬಡಾವಣೆ ವಿನ್ಯಾಸ ನಕ್ಷೆ ಮಂಜೂರಾತಿ ಕೋರಿ, ಬಂದ ಅರ್ಜಿಗಳ ಸಂಖ್ಯೆ ಮತ್ತು ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಹಾಗೂ ಹಿಂದಿನ ಸಾಲಿನಲ್ಲಿ ಮಂಜೂರಾತಿಗೆ ಬಂದ ಅರ್ಜಿಗಳು ವಿಲೇವಾರಿ ಮಾಡಿರುವ ವಿವರ ಹಾಗೂ ದಿನಾಂಕ: ೩೧-೦೩-೨೦೨೪ಕ್ಕೆ ವಿಲೇವಾರಿಯಾಗದೆ ಬಾಕಿ ಇರುವ ಪ್ರಾಧಿಕಾರವು ನೀಡಿರುವ ಮಾಹಿತಿಯಂತೆ ಈ ಕೆಳಕಂಡಂತಿದೆ. ಹಾಗೂ ಬಡಾವಣೆ ವಿನ್ಯಾಸ ನಕ್ಷೆ ಮಂಜೂರಾತಿ ವಿವರಗಳನ್ನು ಅನುಬಂಧ-೦೪ರಲ್ಲಿ ಲಗತ್ತಿಸಿದೆ.

ದಿನಾಂಕ:೦೧-೦೪-೨೦23 ಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ಬಾಕಿ	166
2023–24ನೇ ಸಾಲಿಗೆ ಸ್ವೀಕರಿಸಿದ ಅರ್ಜಿ / ಕಡತಗಳು	113
ಒಟ್ಟು	279
2023–24 ರಲ್ಲಿ ತಾತ್ಕಾಲಿಕ ವಿನ್ಯಾಸ ನಕ್ಷೆಅನುಮೋದನೆ ಅರ್ಜಿ / ಕಡತಗಳು	31
2023–24 ರಲ್ಲಿ ಅಂತಿಮ ವಿನ್ಯಾಸ ನಕ್ಷೆ ಅನುಮೋದನೆ ಅರ್ಜಿ / ಕಡತಗಳು	82
2023–24 ರಲಿ ತಿರಸ್ಕರಿಸಲಾಗಿರುವ ಅರ್ಜಿ / ಕಡತಗಳು	3
ದಿನಾಂಕ:೩೧-೦೩-೨೦೨4 ಕ್ಕೆ ಬಾಕಿ ಉಳಿದ ಅರ್ಜಿ / ಕಡತಗಳು	163

ಬಡಾವಣೆ ವಿನ್ಯಾಸ ನಕ್ಷೆ ಮಂಜೂರಾತಿ ವಹಿ ನಿರ್ವಹಿಸಿ ದೃಢೀಕರಿಸಲು ಕ್ರಮವಹಿಸುವುದು.

36. ಸಿಬ್ಬಂದಿ ಶ್ರೇಣಿ ವಹಿ :

ನೆಲಮಂಗಲ ಯೋಜನಾ ಪ್ರಾಧಿಕಾರ ಕಛೇರಿಗೆ ವಿವಿಧ ಹುದ್ದೆಗಳು ಮಂಜೂರಾಗಿರುವ ಹಾಗೂ ಕಾಲ ಕಾಲಕ್ಕೆ ತಾತ್ಕಾಲಿಕ ಮಂಜೂರಾತಿಯನ್ನು ಮುಂದುವರೆಸುವ ಕುರಿತು ವಹಿಗಳನ್ನು ನಿರ್ವಹಿಸಲು ಹಿಂದಿನ ಸಾಲುಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಸೂಚಿಸಿದ್ದರೂ ಯಾವುದೇ ಕ್ರಮವಹಿಸಿರುವುದಿಲ್ಲ. ಪ್ರಸಕ್ತ ಸಾಲಿನಲ್ಲಿ ಲೆಕ್ಕ ಪರಿಶೋಧನೆಗೆ ಹಾಜರುಪಡಿಸಿದ ದಾಖಲೆಯನ್ವಯ ಸಿಬ್ಬಂದಿಯ ಶ್ರೇಣಿಯ ವಿವರ ಈ ಕೆಳಕಂಡಂತೆ ಇರುತ್ತವೆ.

ಕ್ರ. ಸಂ	ಮಂಜೂರಾದ ಹುದ್ದೆಯ ವಿವರ	ಮಂಜೂರಾದ ಹುದ್ದೆ	ಕಾರ್ಯನಿರ್ವಹಿಸುತ್ತಿರುವ ಹುದ್ದೆ	ಖಾಲಿ ಹುದ್ದೆ
1	ಜಂಟಿ ನಿರ್ದೇಶಕರು	01	01	0
2	ಉಪ ನಿರ್ದೇಶಕರು	01	01	0
3	ಸಹಾಯಕ ನಿರ್ದೇಶಕರು	01	01	0
4	ನಗರ ಯೋಜಕರು	02	02	0
5	ಸಹಾಯಕ ನಗರಯೋಜಕರು	01	0	01
6	ಪ್ರಥಮ ದರ್ಜೆ ಸಹಾಯಕರು	01	01	0
7	ಬೆರಳಚ್ಚುಗಾರರು	01	0	01
8	ಗ್ರೂಪ್ "ಡಿ"	01	0	01
	ಒಟ್ಟು	9	6	3

37. **ಹೊರಗುತ್ತಿಗೆ ನೌಕರರ ಸೌಲಭ್ಯ ಪಡೆಯಲು ಇಲಾಖಾ ಮುಖ್ಯಸ್ಥರಿಂದ ಅನುಮತಿ ಪಡೆಯದೇ, ನೇರವಾಗಿ ಸೌಲಭ್ಯ ಪಡೆದು, ವೆಚ್ಚ ಭರಿಸಿರುವುದು ಹಾಗೂ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿ ಸೌಲಭ್ಯ ಪಡೆದಿರುವುದು.**

ನಗರ ಯೋಜನಾ ಪ್ರಾಧಿಕಾರ, ನೆಲಮಂಗಲ ಕಚೇರಿಗೆ 1 ಸಂಖ್ಯೆ ಡೇಟಾ ಎಂಟ್ರಿ ಆಪರೇಟರ್‌ಗಳು, 01 ಸಂಖ್ಯೆ ತಾಂತ್ರಿಕ ಸಹಾಯಕ, 02 ಸಂಖ್ಯೆ ಕಂಪ್ಯೂಟರ್ ಆಪರೇಟರ್ ಕಮ್ ಟೈಪಿಸ್ಟ್ಸ್, 01 ಸಂಖ್ಯೆ ಸ್ವಚ್ಛತೆ ಸಿಬ್ಬಂದಿ ಮತ್ತು 3 ಮಂದಿ ಗುಂಪು 'ಡಿ' ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು ಟೆಂಡರ್ ಕರೆದು ಸೌಲಭ್ಯವನ್ನು ಪಡೆದಿರುವುದು ಕಂಡುಬಂದಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ:ಆಇ:6:ಟಿಎಫ್‌ಸಿ:2018 ಬೆಂಗಳೂರು ದಿನಾಂಕ:–22–03–2019 ರ ಕ್ರಮ ಸಂಖ್ಯೆ: (1) ರ ಪ್ರಕಾರ ಡೇಟಾ ಎಂಟ್ರಿ ಆಪರೇಟರ್ಸ್‌ಳು, ವಾಹನ ಚಾಲಕರು ಮತ್ತು ಗುಂಪು 'ಡಿ' ನೌಕರರನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯಲು

ಇಲಾಖಾ ಮುಖ್ಯಸ್ಥರಿಂದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಆದರೆ ಈ ಕ್ರಮ ಅನುಸರಿಸಿ, ಇಲಾಖಾ ಮುಖ್ಯಸ್ಥರಿಂದ ಅನುಮತಿಯನ್ನು ಪಡೆದು, ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೌಲಭ್ಯ ಪಡೆಯದೇ, ನೇರವಾಗಿ ಪಡೆದಿರುವುದು ಕಂಡುಬಂದಿರುತ್ತದೆ ಹಾಗೂ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿ ಸೌಲಭ್ಯ ಪಡೆದಿರುವುದು ಕಂಡುಬಂದಿರುತ್ತದೆ. ಯಾವ ನಿಯಮ / ಆದೇಶದ ಪ್ರಕಾರ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸಿಬ್ಬಂದಿ ಸೌಲಭ್ಯ ಪಡೆಯಲಾಗಿದೆ ಎಂಬ ಬಗ್ಗೆ ಸೂಕ್ತ ವಿವರಣೆ ಹಾಗೂ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ವಿವರ ಈ ಕೆಳಕಂಡಂತಿದೆ.

ಕ್ರ.ಸಂ.	ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಹುದ್ದೆಗಳ ಸಂಖ್ಯೆ	ಹೆಚ್ಚುವರಿಯಾಗಿ ಪಡೆದ ಹುದ್ದೆಗಳ ಸಂಖ್ಯೆ
1	ಬೆರಳಚ್ಚುಗಾರರು ಕಮ್ ಕಂಪ್ಯೂಟರ್ ಆಪರೇಟರ್	1	3	2
2	ತಾಂತ್ರಿಕ ಸಹಾಯಕ	0	1	1
3	ಸ್ವಚ್ಛತೆ ಸಿಬ್ಬಂದಿ	0	1	1
4	ಗುಂಪು 'ಡಿ' ನೌಕರ	1	4	3
	ಒಟ್ಟು	2	9	7

ಮೆ:Deepika Corporate Outsource Services, ಬೆಂಗಳೂರು ರವರಿಗೆ ಪ್ರಸಕ್ತ ಸಾಲಿನಲ್ಲಿ ವೆಚ್ಚ ಭರಿಸಿರುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಧನಾದೇಶ ಸಂಖ್ಯೆ	ದಿನಾಂಕ	ಬಿಲ್ಲಿನ ಮೊಬಲಗು	ಜಿ.ಎಸ್.ಟಿ	ಆದಾಯ ತೆರಿಗೆ	ಪಾವತಿ ಮೊಬಲಗು	ವಿವರ
1	4107	20.04.2023	85024.00	1441.00	1442.00	82141.00	ಒಚಿಡಿ–23
2	344	18.05.2023	86890.00	1473.00	1474.00	83943.00	೦೮ಡಿ–23
3	349	06.06.2023	89118.00	1510.00	1510.00	86098.00	ಒಚಿಥಿ–23

4	375	07.07.2023	89118.00	1510.00	1510.00	86098.00	ಎಣಟಿ–23
5	404	05.08.2023	89118.00	1510.00	1510.00	86098.00	ಎಣಟ–23
6	427	05.09.2023	89118.00	1510.00	1510.00	86098.00	ಂಣರ–23
7	449	09.10.2023	89118.00	1510.00	1510.00	86098.00	ಖಜಠಿ–23
8	476	08.11.2023	89118.00	1510.00	1510.00	86098.00	ಔಛಿಣ–23
9	500	07.12.2023	89118.00	1510.00	1510.00	86098.00	ಓಠತ–23
		ಒಟ್ಟು ರೂ.	795740.00	13484.00	13486.00	768770.00	

ಮೆ:ಕಿಯೋನಿಕ್ಸ್, ಬೆಂಗಳೂರು ರವರಿಗೆ ಪ್ರಸಕ್ತ ಸಾಲಿನಲ್ಲಿ ವೆಚ್ಚ ಭರಿಸಿರುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಧನಾದೇಶ ಸಂಖ್ಯೆ	ದಿನಾಂಕ	ಬಿಲ್ಲಿನ ಮೊಬಲಗು	ಜಿ.ಎಸ್.ಟಿ	ಆದಾಯ ತೆರಿಗೆ	ಪಾವತಿ ಮೊಬಲಗು	ವಿವರ
1	4106	20.04.2023	99755.00	0.00	1690.00	98065.00	ಒಚಿಡಿ–23
2	350	06.06.2023	103789.00	0.00	1759.00	102030.00	ಂಠಿಡಿ–23
2	350	06.06.2023	103789.00	0.00	1759.00	102030.00	ಒಚಿಥಿ–23
3	376	07.07.2023	103790.00	0.00	1759.00	102031.00	ಎಣಟಿ–23
4	403	05.08.2023	103790.00	0.00	1759.00	102031.00	ಎಣಟ–23
5	426	05.09.2023	103790.00	0.00	1759.00	102031.00	ಂಣರ–23
6	450	09.10.2023	100380.00	0.00	1701.00	98679.00	ಖಜಠಿ–23
7	477	08.11.2023	103790.00	0.00	1759.00	102031.00	ಔಛಿಣ–23
8	537	30.01.204	103790.00	0.00	1759.00	102031.00	ಓಠತ–23
		ಒಟ್ಟು ರೂ.	926663.00	0.00	15704.00	910959.00	

ಮೇ: S.A Manpower Services Pvt Ltd, ಬೆಂಗಳೂರು ರವರಿಗೆ ಪ್ರಸಕ್ತ ಸಾಲಿನಲ್ಲಿ ವೆಚ್ಚ ಭರಿಸಿರುವ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	ಧನಾದೇಶ ಸಂಖ್ಯೆ	ದಿನಾಂಕ	ಬಿಲ್ಲಿನ ಮೊಬಲಗು	ಜಿ.ಎಸ್.ಟಿ	ಆದಾಯ ತೆರಿಗೆ	ಪಾವತಿ ಮೊಬಲಗು	ವಿವರ
1	513	03.01.2024	225820.00	3827.00	3828.00	218165.00	ಆಜಛಿ–23
2	543	05.02.2024	225820.00	3827.00	3828.00	218165.00	ಏಚಟಿ–24
3	562	05.03.2024	225820.00	3827.00	3828.00	218165.00	ಈಜಛ–24
		ಒಟ್ಟು	677460.00	11481.00	11484.00	654495.00	
		ಒಟ್ಟು ಮೊತ್ತ	2399863.00	24965.00	40674.00	2334224.00	

ಈ ಬಗ್ಗೆ ವಿವರಣೆಯನ್ನು ಕೋರಿ ಲೆಕ್ಕವಿಚಾರಣಾ ಪತ್ರ ಸಂಖ್ಯೆ:– 15/2024–25 ದಿನಾಂಕ:–03–05–2024 ನ್ನು ನೀಡಲಾಗಿ ಪ್ರಾಧಿಕಾರದವರು ಉತ್ತರಿಸಿ ನೆಲಮಂಗಲ ಯೋಜನಾ ಪ್ರಾಧಿಕಾರವು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯನ್ವಯ ರಚಿತವಾದ ಸ್ವಾಯತ್ತ ಸಂಸ್ಥೆಯಾಗಿದ್ದು, ಪ್ರಾಧಿಕಾರದ ದೈನಂದಿನ ಸುಗಮ ಕೆಲಸ ಕಾರ್ಯಗಳಿಗೆ ಆಡಳಿತಾತ್ಮಕ ಹಿತದೃಷ್ಟಿಯಿಂದ ಹೊರಗುತ್ತಿಗೆ ಆಧಾರದ ಮೇಲೆ ನೌಕರರ ಸೇವೆಯನ್ನು ಪಡೆಯುವ ಸಂಬಂಧ/ ಮುಂದುವರೆಸುವ ಸಂಬಂಧ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ಸದರಿ ಸಭೆಯ ತೀರ್ಮಾನದಂತೆ ಹೊರಗುತ್ತಿಗೆ ನೌಕರರ ಸೇವೆಯನ್ನು ಪಡೆಯಲಾಗಿರುತ್ತದೆ ಎಂಬ ಅಂಶವನ್ನು ಲೆಕ್ಕ ಪರಿಶೋಧನೆಗೆ ಹಾಜರುಪಡಿಸಲಾಗಿದೆ. ಈ ಬಗ್ಗೆ ಇಲಾಖಾ ಮುಖ್ಯಸ್ಥರೊಡನೆ ಪತ್ರ ವ್ಯವಹಾರ ಮಾಡಿ ಕ್ರಮ ವಹಿಸಲು ಸೂಚಿಸಿದೆ. ಇಲಾಖಾ ಮುಖ್ಯಸ್ಥರ ಅನುಮತಿ ಅವಶ್ಯವಿದ್ದಲ್ಲಿ ಘಟನೋತ್ತರ ಮಂಜೂರಾತಿ ಪಡೆಯಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

38. ಸ್ಥಿರ ಚರಾಸ್ತಿ ವಹಿ ನಿರ್ವಹಣೆ ಮತ್ತು ವಾರ್ಷಿಕ ಪರಿಶೀಲನೆ ಕುರಿತು :

ಪ್ರಾಧಿಕಾರದ ಸ್ಥಿರ ಮತ್ತು ಚರಾಸ್ತಿಗಳ ಬಗ್ಗೆ ವಹಿಯನ್ನು ನಿರ್ವಹಿಸಿ ಹಾಜರುಪಡಿಸಬೇಕಾಗಿರುತ್ತದೆ, ಪ್ರಾಧಿಕಾರದಲ್ಲಿ ಚರಾಸ್ತಿ ಹಾಗೂ ಸ್ಥಿರ ಆಸ್ತಿಗಳನ್ನು ವಹಿಯಲ್ಲಿ, ಖರೀದಿ ಮಾಡಿದ ದಿನಾಂಕ ಹಾಗೂ ಮೌಲ್ಯದ ಬಗ್ಗೆ ನಮೂದಿಸಿ ವರ್ಷಾಂತ್ಯದಲ್ಲಿ ಭೌತಿಕವಾಗಿ ಪರಿಶೀಲಿಸಿ ಧೃಢೀಕರಿಸಲು ಕ್ರಮವಹಿಸುವುದು.

39. ಒಪ್ಪಿಣಜಡಿ ಕಟಬಿಟಿ ನಲ್ಲಿ ಯೋಜಿಸಲಾದಂತೆ ಅನುಷ್ಠಾನಗೊಳಿಸದಿರುವುದು:

ನೆಲಮಂಗಲ ಯೋಜನಾ ಪ್ರಾಧಿಕಾರದ **Master Plan** ವಿವರವನ್ನು ಪುನರ್ ಪರಿಶೀಲನಾ ವೇಳೆಯಲ್ಲಿ ಪರಿಶೀಲಿಸಲಾಗಿ ಅನುಷ್ಠಾನ ಕುರಿತಂತೆ ಕೆಳಕಂಡ ಗಂಭೀರ ಅಂಶಗಳನ್ನು ಲೆಕ್ಕ ತನಿಖೆಯಲ್ಲಿ ಗಮನಿಸಲಾಗಿದೆ.

1. ಒಪ್ಪಿಣಜಡಿ ಕಟಬಿಟಿ ನಲ್ಲಿ ಅವಕಾಶ ಕಲ್ಪಿಸಲಾದ ಸೌಲಭ್ಯಗಳನ್ನು / ಅಭಿವೃದ್ಧಿ ಕಾರ್ಯಕ್ರಮಗಳನ್ನು ನಿಗಧಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ಸೂಕ್ತ ಕ್ರಮಕೈಗೊಂಡಿರುವುದಿಲ್ಲ ಅನುಷ್ಠಾನ ಪೂರ್ಣಗೊಳಿಸುವಲ್ಲಿ ಯಾವುದೇ ನಿರ್ದಿಷ್ಟ ಅಭಿವೃದ್ಧಿ ಯೋಜನೆಗಳನ್ನ ರೂಪಿಸಿರುವುದಿಲ್ಲ.
2. ಆದಾಯ ವೃದ್ಧಿಸುವ ಮೂಲವನ್ನು ಮತ್ತು ಸ್ವರೂಪವನ್ನು ಸ್ಪಷ್ಟವಾಗಿ ಯೋಜನೆ ಮಾಡಿರುವುದಿಲ್ಲ ಮತ್ತು ನಿರೀಕ್ಷಿತ ಆದಾಯ ಸೃಜನೆಗೊಂಡಿರುವುದಿಲ್ಲ.
3. ಒಪ್ಪಿಣಜಡಿ ಕಟಬಿಟಿನಂತೆ ಸಂಪೂರ್ಣವಾಗಿ ಅಭಿವೃದ್ಧಿಪಡಿಸಲು ವಾರ್ಷಿಕ ಪ್ರಗತಿಯ ಗುರಿ ನಿಗಧಿಪಡಿಸಿಕೊಂಡಿರುವುದಿಲ್ಲ.
4. ಅಂದಾಜು ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯನ್ನು ಅನುಸರಿಸಿ ಭೂಮಿ / ಕಟ್ಟಡಗಳ ಮೌಲ್ಯ ನಿರ್ಧರಣೆ ಲೆಕ್ಕಾಚಾರ ಮಾಡಿಕೊಂಡು ಉತ್ತಮತೆ ಶುಲ್ಕವನ್ನು ವಸೂಲಿಸಿಕೊಂಡು ಮಾಸ್ಟರ್ ಪ್ಲಾನ್ ಸಂಪೂರ್ಣ ಅನುಷ್ಠಾನಗೊಳಿಸಲು ಸಕಾಲಿಕ ಕ್ರಮವಹಿಸಿಲ್ಲದಿರುವುದು ಕಂಡುಬಂದಿರುತ್ತದೆ.
5. ಈ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸಗಳಲ್ಲಿ ನಾಗರೀಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಜಾಗಗಳಾದ ರಸ್ತೆ / ಚರಂಡಿ / ಪಾರ್ಕ್ / ಆಸ್ಪತ್ರೆ / ಆಟದ ಮೈದಾನ ಹಾಗೂ ಸಿ.ಎ ನಿವೇಶನಗಳನ್ನು ಸಂಬಂಧಪಟ್ಟ ಸ್ಥಳೀಯ ಸಂಸ್ಥೆ / ಪ್ರಾಧಿಕಾರಕ್ಕೆ ನೋಂದಣಿ ಮಾಡಿಸಿ ಹಸ್ತಾಂತರಿಸಲಾಗಿರುತ್ತದೆ. ಈ ಸಂಬಂಧ ಸ್ಥಿರಾಸ್ತಿ ವಹಿಯಲ್ಲಿ ವಿವರಗಳನ್ನು ದಾಖಲು ಮಾಡಲು ಪೂರ್ಣ ಪ್ರಮಾಣದಲ್ಲಿ ಕ್ರಮವಹಿಸಿರುವುದಿಲ್ಲ.

40. ರಜಾ ವೇತನ ವಂತಿಕೆ ಮತ್ತು ನಿವೃತ್ತಿ ವೇತನ ವಂತಿಕೆಗಳನ್ನು ಸಂಬಂಧಿಸಿದ ನಿಧಿಗೆ ಪಾವತಿಸದಿರುವುದು:-

ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 1958ರ ನಿಯಮ ೪೨೫ ಮತ್ತು ೪೨೭ರ ನೆಲಮಂಗಲ ಯೋಜನಾ ಪ್ರಾಧಿಕಾರ ಕಚೇರಿಯಲ್ಲಿ ಅನ್ಯ ಸೇವೆಯಡಿ ನಿಯೋಜನೆ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ವಿವಿಧ ಇಲಾಖೆಗಳ

ಅಧಿಕಾರಿ/ಸಿಬ್ಬಂದಿಗಳ 2023–24ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ರಜಾ ವೇತನ ಮತ್ತು ನಿವೃತ್ತಿ ವೇತನ ವಂತಿಕೆಯ ವಿವರಗಳು ಈ ಕೆಳಕಂಡಂತಿವೆ.

(ರೂ.ಗಳಲ್ಲಿ)

ಕ್ರ. ಸಂ	ಅಧಿಕಾರಿ/ಸಿಬ್ಬಂದಿ ಹೆಸರು ಮತ್ತು ಪದನಾಮ	2022–23ನೇ ಸಾಲಿನಲ್ಲಿ ಪಡೆದಿರುವ ಮೂಲ ವೇತನ (ರೂ.ಗಳಲ್ಲಿ)	ರಜಾ ವೇತನ ವಂತಿಕೆ ಶೇ.೧೧ (ರೂ.ಗಳಲ್ಲಿ)	ನಿವೃತ್ತಿ ವೇತನ ವಂತಿಕೆ (1/8) (ರೂ.ಗಳಲ್ಲಿ)
1	ಶ್ರೀ.ಟಿ.ಎಲ್.ಲಕ್ಷ್ಮೀಪತಿ ಜಂಟಿ ಉಪ ನಿರ್ದೇಶಕರು	1104000.00	138000.00	121440.00
2	ಶ್ರೀ.ವೆಂಕಟೇಶಪ್ಪ.ಸಿ.ವಿ ಉಪ ನಿರ್ದೇಶಕರು	1032900.00	129113.00	113619.00
3	ಶ್ರೀ.ಬಿ.ಆರ್.ರಮೇಶ್ ಸಹಾಯಕ ನಿರ್ದೇಶಕರು	898500.00	0.00	98835.00
4	ಶ್ರೀ.ಅವಿನಾಶ್ ಬರಗಿ ನಗರ ಯೋಜಕರು	272435.00	0.00	29968.00
5	ಶ್ರೀ.ಪ್ರಜ್ವಲ್.ಎಸ್.ಬಿ ನಗರ ಯೋಜಕರು	528484.00	0.00	58133.00
6	ಶ್ರೀ.ಚೇತನ್.ಕೆ.ವಿ ನಗರ ಯೋಜಕರು	493661.00	0.00	54303.00
7	ಶ್ರೀ.ಬಿ.ಆರ್.ಗಿರೀಶ್ ಪ್ರಥಮ ದರ್ಜೆ ಸಹಾಯಕರು	481800.00	60225.00	52998.00
	ಒಟ್ಟು	4811780.00	327338.00	529296.00

ಮೇಲ್ಕಂಡ ರಜಾ ವೇತನ ವಂತಿಕೆ ಮತ್ತು ನಿವೃತ್ತಿ ವೇತನ ವಂತಿಕೆಯನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗಳಿಗೆ ಜಮಾ ಮಾಡಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.

ರಜಾ ವೇತನ ವಂತಿಕೆ ಮತ್ತು ನಿವೃತ್ತಿ ವೇತನ ವಂತಿಕೆ:-

2023–24ನೇ ಸಾಲಿನಲ್ಲಿ ಸರ್ಕಾರಕ್ಕೆ ಪಾವತಿಸಬೇಕಾದ ರಜಾ ವೇತನ ವಂತಿಕೆ ವಿವರ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

೦೧-೦೪-೨೦೨3ಕ್ಕೆ ಪ್ರಾರಂಭ ಶಿಲ್ಕು	3417527.00

2023–24ಕ್ಕೆ ಜಮಾ ಮಾಡಬೇಕಾದ ಮೊತ್ತ	856634.00
ಒಟ್ಟು	4274161.00
2023–24ನೇ ಸಾಲಿನಲ್ಲಿ ಜಮಾ ಮಾಡಿರುವ ಬಾಬ್ತು	883795.00
31–03–2024ಕ್ಕೆ ಬಾಕಿ	3390366.00

ಅನ್ಯ ಸೇವೆಯಡಿ ವಿವಿಧ ಇಲಾಖೆಗಳಿಂದ ನಿಯೋಜನೆಗೊಂಡು ಕರ್ತವ್ಯ ನಿರ್ವಹಿಸಿರುವ ಅಧಿಕಾರಿ/ಸಿಬ್ಬಂದಿಗಳ ರಜಾ ವೇತನ ಮತ್ತು ನಿವೃತ್ತಿ ವೇತನ ವಂತಿಕೆಯ ಬಾಕಿ ಮೊತ್ತವನ್ನು ಸರ್ಕಾರದ ನಿಗಧಿತ ಲೆಕ್ಕ ಶೀರ್ಷಿಕೆಗೆಳಿಗೆ ಜಮಾ ಮಾಡಲು ಕ್ರಮವಹಿಸುವುದು ಹಾಗೂ ಪ್ರಸಕ್ತ ಸಾಲಿನ ರೂ. 856634/– ಗಳನ್ನು ಚಲನ್ ಸಂಖ್ಯೆ: CR0524007100112314 ಮತ್ತು CR0524021700112389, ದಿನಾಂಕ:15.05.2024ರಂದು ನಿಗಧಿತ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡಿರುತ್ತಾರೆ.

ಅಧಿಕಾರಿ /ನೌಕರರವಾರು ವಿವರಗಳನ್ನು ಅನುಬಂಧ–4ರಲ್ಲಿ ನೀಡಿ ವರದಿಗೆ ಲಗತ್ತಿಸಿದೆ.

41. ಮಾಹಿತಿ ಹಕ್ಕು ಅರ್ಜಿ ಮೊತ್ತವನ್ನು ಸಂಬಂಧಿಸಿದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡದಿರುವ ಬಗ್ಗೆ :

2023–24ನೇ ಸಾಲಿನಲ್ಲಿ ಮಾಹಿತಿ ಹಕ್ಕು ಅಧಿನಿಯಮ ದಡಿಯಲ್ಲಿ ಮಾಹಿತಿ ಕೋರಿ ಅರ್ಜಿ ಸಲ್ಲಿಸಿರುವ ಅರ್ಜಿದಾರರು ಮಾಹಿತಿದಾರರಿಂದ ಒಟ್ಟು ರೂ.4300/– ಗಳನ್ನು ಮಾಹಿತಿ ನೀಡುವಿಕೆ ಸಂಬಂಧ ಪಡೆದಿರುವುದು ಕಂಡುಬಂದಿರುತ್ತದೆ. ಸದರಿ ಮೊತ್ತವನ್ನು ಸಂಬಂಧಿಸಿದ ಸರ್ಕಾರದ ಲೆಕ್ಕ ಶೀರ್ಷಿಕೆಗೆ ರೂ.4300/– ಗಳನ್ನು ಚಲನ್ ಸಂಖ್ಯೆ: CR0524007000112192, ದಿನಾಂಕ: 15.05.2024 ರಂದು ಜಮೆ ಮಾಡಿರುತ್ತಾರೆ.

42. ಲೆಕ್ಕ ಪರಿಶೋಧನಾ ಶುಲ್ಕ:

2023–24ನೇ ಸಾಲಿನಲ್ಲಿ ಆರ್ಥಿಕ ವಹಿವಾಟಿನ ಆಧಾರದ ಮೇಲೆ ಲೆಕ್ಕ ತನಿಖಾ ಶುಲ್ಕವನ್ನು ಈ ಕೆಳಕಂಡಂತೆ ನಿಗಧಿಪಡಿಸಿದೆ ವಿವರ ಕೆಳಕಂಡಂತಿದೆ.

(ರೂ. ಗಳಲ್ಲಿ)

ಒಟ್ಟು ಜಮಾ	2431286299.00	ಒಟ್ಟು ಖರ್ಚು	2425712899.00
ಕಳೆಯುವುದು		ಕಳೆಯುವುದು	
	0.00	Sweep in & out-Flexi Account - TDS	26365.00
ಮುಂಗಡಗಳ ಹೊಂದಾಣಿಕೆ	0.00	ಎಸ್.ಟಿ.ಪಿ.ಬಿ 5%	4825700.00

ಪಕ್ವವಾದ ನಿಶ್ಚಿತ ಠೇವಣಿ ಮೊತ್ತ ಖಾತೆಗೆ ಜಮೆ	833570277.00	ಹೂಡಿಕೆಗಳ ನಗಧೀಕರಣ	1064700000.00
ಬ್ಯಾಂಕ್ ಬಡ್ಡಿ	6310766.00	ಠೇವಣಿ ಮರುಪಾವತಿ	0.00
ಠೇವಣಿ	5384100.00	ಸಾಲ ಮರುಪಾವತಿ	0.00
ಸಾಲ ಪಡೆದಿದ್ದು	0.00	ಬ್ಯಾಂಕ್ ವೆಚ್ಚ	4430.00
ಸೆಸ್ ಮೊತ್ತ	56028719.00	ಐಟಿ ಟಿಡಿಎಸ್	179014.00
ಐಟಿ ಟಿಡಿಎಸ್	179014.00	ಜಿ.ಎಸ್.ಟಿ ಟಿಡಿಎಸ್	102312.00
ಜಿ.ಎಸ್.ಟಿ ಟಿಡಿಎಸ್	102312.00	ಆರ್.ಟಿ.ಐ ಶುಲ್ಕ	27760.00
ಕೊಳಚೆ ನಿರ್ಮೂಲನಾ ಕರ	3939390.00	ಲೆಕ್ಕಪರಿಶೋಧನಾ ಶುಲ್ಕ	355366.00
Sweep Transfer (Sweep in & out-Flexi Account)	108674386.00	Sweep Transfer (Sweep in & out-Flexi Account)	113797000.00
ವರ್ಗಾವಣೆ	1225250097.00	ವರ್ಗಾವಣೆ	1225250097.00
ಕಳೆಯಬೇಕಾದ ಜಮಾ	2239439061.00	ಕಳೆಯಬೇಕಾದ ಖರ್ಚು	2409268044.00
ಒಟ್ಟು ಜಮೆ	191847238.00	ಒಟ್ಟು ಖರ್ಚು	16444855.00
ಒಟ್ಟು ಜಮೆ	191847238.00		
ಒಟ್ಟು ಖರ್ಚು	16444855.00		
ಲೆಕ್ಕಪರಿಶೋಧನಾ ಶುಲ್ಕಕ್ಕೆ ಒಳಪಡಿಸುವ ಮೊತ್ತ	208292093.00		
ಒಟ್ಟು ರೂ.208292093/– ಕ್ಕೆ ರೂ.100/– ಕ್ಕೆ 20 ಪೈಸೆಯಂತೆ ಒಟ್ಟು ರೂ.416584/–ನ್ನು ಸರ್ಕಾರಕ್ಕೆ ಜಮಾ ಮಾಡಲು ಕ್ರಮ ವಹಿಸುವುದು			

2023–24ನೇ ಸಾಲಿನ ಅಂತ್ಯಕ್ಕೆ ಲೆಕ್ಕ ಪರಿಶೋಧನಾ ಶುಲ್ಕದ ಘೋಷ್ವಾರೆ ಈ ಕೆಳಕಂಡಂತಿದೆ.

(ರೂ.ಗಳಲ್ಲಿ)

ಕ್ರ. ಸಂ	ವಿವರ	ಮೊತ್ತ
1.	ದಿ:೦೧–೦೪–೨೦೨3ಕ್ಕೆ ಪ್ರಾರಂಭಿಕ ಬಾಕಿ	355366.00
2.	2023–24ನೇ ಸಾಲಿನಲ್ಲಿ ಪಾವತಿಸಬೇಕಾದ ಮೊತ್ತ	416584.00
	ಒಟ್ಟು ಮೊತ್ತ	**771950.00**

3.	2023–24ನೇ ಸಾಲಿನ ಪಾವತಿ ಮೊತ್ತ	771950.00
4.	ದಿ:೩೧–೦೩–೨೦೨4 ಕ್ಕೆ ಬಾಕಿ ಇರುವ ಅಖೈರು ಶಿಲ್ಕು	0.00

ಲೆಕ್ಕಪರಿಶೋಧನಾ ಶುಲ್ಕ ರೂ.355366/– ಗಳನ್ನು ಚಲನ್ ಸಂಖ್ಯೆ.ಸಿಆರ್0623007000259500 ದಿನಾಂಕ:14–06–2023 ಮತ್ತು ರೂ.416584/– ಗಳನ್ನು ಚಲನ್ ಸಂಖ್ಯೆ.ಸಿಆರ್0524007000172372 ದಿನಾಂಕ:21–05–2024 ರ ಪ್ರಕಾರ ಜಮೆ ಮಾಡಿರುವ ವಿವರಗಳನ್ನು ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿದೆ.

ಲೆಕ್ಕ ಶೀರ್ಷಿಕೆ:

೦೦೭೦	ಇತರೆ ಆಡಳಿತ ಸೇವೆಗಳು
೦೬೦	ಇತರೆ ಸೇವೆಗಳು
೧೧೦	ಸರ್ಕಾರಿ ಲೆಕ್ಕಾ ತನಿಖೆ ಶುಲ್ಕ
0–೦೧	ಆಡಿಟ್ ಶುಲ್ಕ

43. ಸಾಮಾನ್ಯ ಅಭಿಪ್ರಾಯ

1. ದಿನವಹಿಯನ್ನು ನಿಯಮರೀತ್ಯ ನಿರ್ವಹಿಸುವುದು.
2. ನಗದು ಪುಸ್ತಕವನ್ನು ಪ್ರತ್ಯೇಕವಾಗಿ ಬ್ಯಾಂಕ್ ಖಾತೆವಾರು ದ್ವಿನಮೂದು ಪದ್ಧತಿಯಲ್ಲಿ ನಿರ್ವಹಿಸಲು ಸೂಚಿಸಿದೆ.
3. ವಾರ್ಷಿಕ ಲೆಕ್ಕಪತ್ರಗಳನ್ನು ನಿರ್ವಹಿಸಿ ಸಲ್ಲಿಸಲು ಅಗತ್ಯ ಕ್ರಮ ವಹಿಸಲು ಸೂಚಿಸಿದೆ.
4. ಪ್ರಾಧಿಕಾರಕ್ಕೆ ಸಂಬಂಧಿಸಿದ ಎಲ್ಲಾ ಚರ ಸ್ಥಿರಾಸ್ತಿ ವಹಿ ನಿರ್ವಹಿಸಿ ಮಾಹಿತಿ ದಾಖಲಿಸಲು ಸೂಚಿಸಿದೆ.
5. ಪ್ರಾಧಿಕಾರದ ಆರ್ಥಿಕ ವಹಿವಾಟು ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿದ್ದು ಜವಾಬ್ದಾರಿಯುತ ಖಾಯಂ ಸಿಬ್ಬಂದಿಯ ಅವಶ್ಯಕತೆಯಿದ್ದು ನೇಮಕಾತಿ ಮಾಡಿಕೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಗಮನ ಸೆಳೆಯಲು ಕ್ರಮವಹಿಸುವುದು ಅಗತ್ಯವಾಗಿರುತ್ತದೆ.

ಸಹಿ/–

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ
ಪರಿಶೋಧನಾ ವರ್ತುಲ
ಬೆಂಗಳೂರು